ದೆಹಲಿ ಕರ್ನಾಟಕ ಸಂಘದ

# ಅಭಿಮತ

ಅಕ್ಟೋಬರ್ 2014
ಬೆಲೆ ರೂ. 1



# ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 25 ಸಂಚಿಕೆ 1
ಅಕ್ಟೋಬರ್ 2014, ಬೆಲೆ ರೂ. 1

**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷ
ವಸಂತ ಶೆಟ್ಟಿ ಬೆಳ್ಳಾರೆ: 9958697823

ಉಪಾಧ್ಯಕ್ಷರು
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

ಪ್ರಧಾನ ಕಾರ್ಯದರ್ಶಿ
ಸಿ.ಎಂ.ನಾಗರಾಜ: 9811325440

ಕೋಶಾಧಿಕಾರಿ
ಡಾ. ಅವನೀಂದ್ರನಾಥ್ ರಾವ್ 9868123382

ಜಂಟಿ ಕಾರ್ಯದರ್ಶಿಗಳು
ಎಸ್.ಸಿ. ಹೇಮಲತ: 9971121636
ಟಿ.ಎಂ. ಮೈಲಾರಪ್ಪ: 9868347461

ಸಮಿತಿ ಸದಸ್ಯರು
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

ವಿಶೇಷ ಆಹ್ವಾನಿತರು
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ

## ನೇರ ಮಾತು

ದೆಹಲಿ ಕರ್ನಾಟಕ ಸಂಘದ ಮುಖವಾಣಿ 'ಅಭಿಮತ'ಕ್ಕೆ ಇದೀಗ 25ರ ಸಂಭ್ರಮ. ಗೌರವಾನ್ವಿತ ಶ್ರೀ ಎನ್.ಪಿ. ಭಟ್ ಮತ್ತು ಶ್ರೀ ಸಿ.ವಿ. ಗೋಪಿನಾಥ್ ಅವರ ಕಾರ್ಯಾವಧಿಯಲ್ಲಿ ಆರಂಭಗೊಂಡ ಅಭಿಮತ ಇಂದು ಪತ್ರಿಕಾ ಮಾಧ್ಯಮದಲ್ಲೊಂದು ದಾಖಲೆಯಾಗಿ ಬೆಳೆದು ನಿಂತಿದೆ. ಅಭಿಮತವನ್ನು ಯಶಸ್ವಿಯಾಗಿ ಹೊರತರುವಲ್ಲಿ ಶ್ರಮಿಸಿದ ಮತ್ತು ಪ್ರೀತಿಯಿಂದ ಓದಿ ತಮ್ಮದಾಗಿಸಿಕೊಂಡ ಎಲ್ಲ ಓದುಗರಿಗೆ ನಮ್ಮ ಕೃತಜ್ಞತೆಗಳು. ಈ ಸಂದರ್ಭದಲ್ಲಿ ಅಭಿಮತದ ವಿಶೇಷಾಂಕವೊಂದನ್ನು ಹೊರ ತರುವುದರ ಜೊತೆಗೆ ಹಲವು ಕೃತಿಗಳನ್ನು ಪ್ರಕಟಿಸುವ ಪ್ರಯತ್ನ ಮಾಡಲಾಗುವುದು. ಅಭಿಮತ 25ರ ಪ್ರಥಮ ಸಂಚಿಕೆಯ ಜೊತೆಜೊತೆಗೆ 'ವಾರ್ಧಾಯಾತ್ರೆ' ಪುಸ್ತಕ ಬಿಡುಗಡೆ ಶೀಘ್ರದಲ್ಲೇ ನಡೆಯಲಿದೆ.

ಕನ್ನಡದ ಪ್ರಸಿದ್ಧ ಸಾಹಿತಿ ಮತ್ತು ಗಾಂಧಿವಾದಿ ದಿ. ಸಿದ್ಧವ್ವನ ಹಳ್ಳಿ ಕೃಷ್ಣ ಶರ್ಮ ಅವರು ಬರೆದ ಮಹತ್ವದ ಕೃತಿ 'ವಾರ್ಧ ಯಾತ್ರೆ'ಯ ಆಂಗ್ಲ ಅನುವಾದವನ್ನು ದೆಹಲಿ ಕರ್ನಾಟಕ ಸಂಘ ಪ್ರಕಟಿಸುತ್ತಿರುವುದು ಹೆಮ್ಮೆಯ ಹಾಗೂ ಸಂತಸದ ಸಂಗತಿ. ಕನ್ನಡಿಗರು ಅಭಿಮಾನಪಡುವ ದಿವಂಗತ ಎಚ್.ವೈ. ಶಾರದಾಪ್ರಸಾದ್ ಅವರು ಇದರ ಅನುವಾದವನ್ನು ಮಾಡಿರುವುದು ವಿಶೇಷ. ಶಾರದಾಪ್ರಸಾದ್ ಅವರು ಮಾಜಿ ಪ್ರಧಾನಿ ದಿವಂಗತ ಶ್ರೀಮತಿ ಇಂದಿರಾ ಗಾಂಧಿಯವರ ಮಾಧ್ಯಮ ಸಲಹೆಗಾರರಾಗಿದ್ದವರು.

ಇಂದಿರಾ ಗಾಂಧಿಯವರಿಂದ ತೊಡಗಿ ದಿ.ಪಿ.ವಿ. ನರಸಿಂಹ ರಾವ್ ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ ಮೂವರು ಕನ್ನಡಿಗರು ಬೇರೆ ಬೇರೆ ಪ್ರಧಾನ ಮಂತ್ರಿಗಳಿಗೆ ಮಾಧ್ಯಮ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದ್ದು ಗಮನಾರ್ಹ. ದಿ.ಎಚ್.ವೈ. ಶಾರದಾ ಪ್ರಸಾಧ್ ಅವರ ನಂತರ ಶ್ರೀ ಐ. ರಾಮಮೋಹನ್ ರಾವ್ ಹಾಗೂ ಶ್ರೀ ಕೆ. ನರೇಂದ್ರ ಅವರು ದೇಶದ ಶಕ್ತಿ ಕೇಂದ್ರವೆನಿಸಿದ ಪ್ರಧಾನಿಗಳ ಕಾರ್ಯಾಲಯದಲ್ಲಿ ಪ್ರಭಾವಶಾಲಿಗಳಾಗಿ ಉನ್ನತ ಸ್ಥಾನದಲ್ಲಿ ಇದ್ದರು ಎಂಬುದು ಐತಿಹಾಸಿಕವಾಗಿಯೂ ಒಂದು ದಾಖಲೆ. ಶಾರದಾ ಪ್ರಸಾಧ್ ಅವರು ನಿಧನರಾಗುವ ಕೆಲ ಸಮಯದ ಹಿಂದೆ ತನ್ನಲ್ಲಿದ್ದ ಹಸ್ತ ಬರಹದ 'ವಾರ್ಧಾ ಯಾತ್ರೆ'ಯನ್ನು ಪ್ರಕಟಿಸುವಂತೆ ತನಗೆ ಆತ್ಮೀಯರಾಗಿದ್ದ ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರೂ ಆಗಿದ್ದ ಐ. ರಾಮಮೋಹನ ರಾವ್ ಅವರಲ್ಲಿ ಕೇಳಿಕೊಂಡಿದ್ದರು. ಹಿರಿಯರಾದ ಶ್ರೀ ರಾಮಮೋಹನ ರಾವ್ ಇದನ್ನು ದೆಹಲಿ ಕರ್ನಾಟಕ ಸಂಘ ಪ್ರಕಟಿಸುವುದು ಸೂಕ್ತವೆಂದು ಮನಗೊಂಡು ನಮಗೆ ಪ್ರಕಟಿಸಲು ಅವಕಾಶ ನೀಡಿರುವುದು ಸಂಘದ ಸೌಭಾಗ್ಯ.

ಈ ಕೃತಿಯು ಗಾಂಧಿಯುಗದ ಚಿತ್ರಣವನ್ನು ಆಪ್ತವಾಗಿ ನಮ್ಮ ಕಣ್ಣ ಮುಂದೆ ಇಡುತ್ತದೆ. ಇಂತಹ ಮಹತ್ವದ ಹಾಗೂ ಆಸಕ್ತಿದಾಯಕ ಕೃತಿಯನ್ನು ದೆಹಲಿ ಕರ್ನಾಟಕ ಸಂಘದ ಮೂಲಕ ಓದುಗರಿಗೆ ನೀಡುತ್ತಿರುವುದು ಸಂಘದ ಚಟುವಟಿಕೆಯಲ್ಲೂ ಒಂದು ಅವಿಸ್ಮರಣೀಯ ಘಟನೆ. ಈ ಕೃತಿ ವಿದ್ಯಾರ್ಥಿಗಳಿಗೆ, ಇತಿಹಾಸಗಾರರಿಗೆ ಹಾಗೂ ಅಧ್ಯಯನಕಾರರಿಗೆ ಬಹಳ ಉಪಯುಕ್ತವಾಗಲಿದೆ ಎಂಬುದು ನಮ್ಮ ಆಶಯ.

ಕನ್ನಡ ಕೃತಿ 'ವಾರ್ಧಾ ಯಾತ್ರೆ'ಯ ಲೇಖಕ ದಿ. ಸಿದ್ಧವ್ವನಹಳ್ಳಿ ಕೃಷ್ಣ ಶರ್ಮ, ಕೃತಿಯನ್ನು ಆಂಗ್ಲ ಭಾಷೆಗೆ ಅನುವಾದಿಸಿದ ದಿ.ಎಚ್.ವೈ. ಶಾರದಾ ಪ್ರಸಾದ್ ಮತ್ತು ಈ ಕೃತಿಯನ್ನು ಹೊರತರಲು ಸ್ವತಃ ಮುತುವರ್ಜಿ ವಹಿಸಿ ದುಡಿದ ಹಿರಿಯರಾದ ಶ್ರೀ ಐ. ರಾಮಮೋಹನ ರಾವ್ ಹಾಗೂ ಸಹಕರಿಸಿದ ಎಲ್ಲರನ್ನೂ ಸಂಘ ಕೃತಜ್ಞತೆಯಿಂದ ಸ್ಮರಿಸುತ್ತದೆ. ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಪೂರ್ಣಿಮಾ ಗೌಡ ಸಂಚಾಲಕರಾಗಿ ವಿಶೇಷ ಕೊಡುಗೆ ನೀಡಿರುತ್ತಾರೆ ಅವರಿಗೂ, ಸಂಘದ ಎಲ್ಲಾ ಪದಾಧಿಕಾರಿಗಳಿಗೆ ನನ್ನ ಕೃತಜ್ಞತೆಗಳು. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಆಟೋಟ, ಸಾಂಸ್ಕೃತಿಕ ಸ್ಪರ್ಧೆಗಳು ಜೊತೆಗೆ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ನಿಗದಿತ ಸಮಯದಲ್ಲಿ ಮುಕ್ತಾಯಗೊಂಡಿವೆ. ಪ್ರತಿ ವರ್ಷ ಕೂಡ ಇದೇ ಸಂದರ್ಭದಲ್ಲಿ ಆಯೋಜಿಸಬೇಕೆಂಬುದು ನಮ್ಮ ಹಂಬಲ. ಈ ಬಾರಿಯ ಆಟೋಟ ಸ್ಪರ್ಧೆಗಳಲ್ಲಿ ಸಂಘದ ಹಿರಿಯ ಸದಸ್ಯರುಗಳು ಮತ್ತು ಹೊಸ ಸದಸ್ಯರುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ. ಮುಂಬರುವ ಕಾರ್ಯಕ್ರಮಗಳಲ್ಲಿ ಶಿವರಾಮ ಕಾರಂತ ಪ್ರಶಸ್ತಿ ಪ್ರದಾನ, ದಿ.ಎಚ್.ವೈ.ಶಾರದಾ ಪ್ರಸಾದ್ ಅವರು ಆಂಗ್ಲ ಭಾಷೆಗೆ ಅನುವಾದಿಸಿರುವ **'A Journey to Wardha'** ಕೃತಿಯ ಬಿಡುಗಡೆ, ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ, ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವ ಕಾರ್ಯಕ್ರಮ ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಹೊರಗಿನ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಯ ಜೊತೆಗೆ ಸ್ಥಳೀಯ ಸಂಘ ಸಂಸ್ಥೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗುವುದು.

ದೆಹಲಿ ಕರ್ನಾಟಕ ಸಂಘಕ್ಕೆ ಕನ್ನಡಿಗರು ಸದಸ್ಯರಾಗುತ್ತಿದ್ದರೂ ಕೂಡಾ ಹೊಸ ಸಂವಿಧಾನದ ಪ್ರಕಾರ ಆಜೀವ ಸದಸ್ಯತ್ವವನ್ನು ಪಡೆಯಬೇಕಾದರೆ ಮೂರು ವರ್ಷ ಕಾಯಬೇಕಾಗುತ್ತದೆ. ಈ ಕುರಿತು ನಾವು ಮತ್ತೊಮ್ಮೆ ಯೋಚಿಸಬೇಕಾದ ಅಗತ್ಯವಿದೆ.

ಎಲ್ಲ ಕನ್ನಡಿಗರಿಗೂ ದೀಪಾವಳಿಯ ಹಾರ್ದಿಕ ಶುಭಾಶಯಗಳು. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***

ದೆಹಲಿ ಕರ್ನಾಟಕ ಸಂಘದಲ್ಲಿ

# ತಿಂಗಳ ಕಾರ್ಯಕ್ರಮ

**19 ಅಕ್ಟೋಬರ್ 2014 ಭಾನುವಾರ ಸಂಜೆ : 4.30ಗಂಟೆಗೆ**

ಸ್ಥಳ : ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಸಭಾ ಭವನ

**ಸಾಹಿತ್ಯ ವೈವಿಧ್ಯ** : ಹಳೆಗನ್ನಡ, ಹೊಸಗನ್ನಡ ಮತ್ತು ಸ್ವರಚಿತ ಕವನಗಳ ವಾಚನ, ಭಾವಗೀತೆ, ಸಾಹಿತ್ಯದ ಕುರಿತ ಸಂವಾದ, ಸಾಹಿತ್ಯ ಪಠ್ಯಗಳ ಓದು, ಕನ್ನಡೇತರ ಕೃತಿಗಳ ಅವಲೋಕನ ಇತ್ಯಾದಿ ವೈವಿಧ್ಯಮಯ ಕಾರ್ಯಕ್ರಮಗಳು. ದೆಹಲಿ ಪರಿಸರದ ಸಾಹಿತ್ಯಾಸಕ್ತರಿಗೆ ತಮ್ಮ ಸೃಜನಶೀಲತೆಯ ಅಭಿವ್ಯಕ್ತಿಗೊಂದು ಸುಂದರ ಅವಕಾಶ. ಭಾಗವಹಿಸಲಿಚ್ಛಿಸುವವರು ದಯವಿಟ್ಟು ಸಂಘವನ್ನು ಸಂಪರ್ಕಿಸಿರಿ.

## ತಿಂಗಳ ನಾಟಕ

**26 ಅಕ್ಟೋಬರ್ 2014 ಭಾನುವಾರ ಸಂಜೆ : 4.00 ಗಂಟೆಗೆ**

ನಾಟಕ : ಗೋವಿಂದಾನಿ ಗೋವಿಂದಾ ಗೋವಿಂದ !
ರಚನೆ ಮತ್ತು ನಿರ್ದೇಶನ
ಪ್ರೊ. ಸಖಾರಾಮ ಸೋಮಯಾಜಿ ಉಪ್ಪೂರು
ನಾಟಕದ ಅವಧಿ : 1 ಗಂಟೆ 10 ನಿಮಿಷ

**1 ನವೆಂಬರ್ 2014 ಶನಿವಾರ ಬೆಳಿಗ್ಗೆ : 8.00 ಗಂಟೆಗೆ**

ಕರ್ನಾಟಕ ರಾಜ್ಯೋತ್ಸವ : ಧ್ವಜಾರೋಹಣ

**5 ನವೆಂಬರ್ 2014 ಬುಧವಾರ ಸಂಜೆ : 6.00 ಗಂಟೆಗೆ**

ನಾಟಕ : ಪುಷ್ಪರಾಣಿ, ರಚನೆ : ಚಂದ್ರಶೇಖರ ಕಂಬಾರ,
ಪ್ರಸ್ತುತಿ : ಮಂಡ್ಯ ರಮೇಶ್‌ರವರ 'ನಟನ' ತಂಡದಿಂದ

**9 ನವೆಂಬರ್ 2014 ಭಾನುವಾರ ಸಂಜೆ : 4.00 ಗಂಟೆಗೆ**

ದಿ. ಎಚ್.ವೈ. ಶಾರದಾ ಪ್ರಸಾದ್ ಅವರ ಇಂಗ್ಲಿಷ್ ಅನುವಾದಿತ 'A Journey to Wardha' ಪುಸ್ತಕ ಬಿಡುಗಡೆ, ಪದ್ಮಶ್ರೀ ಮಾಯಾರಾವ್–ಒಂದು ನೆನಪು, ಯಕ್ಷಗಾನ–ಸುಭದ್ರ ಕಲ್ಯಾಣ, ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ, ಕೆರೆಮನೆ ಕಲಾವಿದರಿಂದ

## ಸಂಘದ ಆರ್ಟ್ ಗ್ಯಾಲರಿಯಲ್ಲಿ ಚಿತ್ರ ಕಲಾ ಪ್ರದರ್ಶನ

**10 ರಿಂದ 16 ಅಕ್ಟೋಬರ್ 2014**

**ಮಂಜುನಾಥ ಎಚ್.ಎಸ್.** ಮತ್ತು ತಂಡದಿಂದ
ಸಮೂಹ ಚಿತ್ರಕಲಾ ಪ್ರದರ್ಶನ

**18 ರಿಂದ 23 ಅಕ್ಟೋಬರ್ 2014**

**ಬಿಂದು ಪಿ.ವಿ.** ಅವರಿಂದ
ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ

**25 ರಿಂದ 31 ಅಕ್ಟೋಬರ್ 2014**

**ಯೋಗೀಶ ಚ. ಮಠದ,** ಬೀದರ್ ಇವರಿಂದ
ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ

## ವಿದ್ಯಾರ್ಥಿ ವೇತನ 2014–15

ದೆಹಲಿ ಕರ್ನಾಟಕ ಸಂಘದಿಂದ 2014–15ನೇ ಸಾಲಿಗಾಗಿ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ.

ಸಂಘದ ಸದಸ್ಯರು ಅರ್ಜಿಯನ್ನು ಸಂಘದ ಕಾರ್ಯಾಲಯದಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು 5 ನವೆಂಬರ್ 2014ರೊಳಗಾಗಿ ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕು.

ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಅ

*ಪ್ರಧಾನ ಕಾರ್ಯದರ್ಶಿ*

## ದೆಹಲಿಯಲ್ಲಿ ಕನ್ನಡದ ಕಾರ್ಯಕ್ರಮ

**26 ಅಕ್ಟೋಬರ್ 2014 ಭಾನುವಾರ ಸಂಜೆ : 7.00ಗಂಟೆಗೆ**

ಸ್ಥಳ : ಸ್ಟೈನ್ ಸಭಾಂಗಣ, ಇಂಡಿಯಾ ಹೆಬಿಟೇಟ್ ಸೆಂಟರ್
ಲೋಧಿ ರಸ್ತೆ, ನವದೆಹಲಿ

ಇಂಡಿಯಾ ಹೆಬಿಟೇಟ್ ಸೆಂಟರ್, ನವದೆಹಲಿ ಅರ್ಪಿಸುವ **ಅಕ್ಕಮಹಾದೇವಿ** ಭರತನಾಟ್ಯ ಕಾರ್ಯಕ್ರಮ ಮಂಜುಳಾ ಅಮರೇಶ್ ಅವರಿಂದ

## ಜಾನಪದ ಸಮೂಹ ನೃತ್ಯ ಕಾರ್ಯಕ್ರಮ

ದೆಹಲಿ ಕರ್ನಾಟಕ ಸಂಘವು ಕರ್ನಾಟಕ ರಾಜ್ಯೋತ್ಸವ ಮತ್ತು ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವ ಪ್ರಯುಕ್ತ ಸಮೂಹ ಜಾನಪದ ನೃತ್ಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ದೆಹಲಿ ಮತ್ತು ದೆಹಲಿ ಪರಿಸರದ ಎಲ್ಲ ಕನ್ನಡ ಸಂಘ ಸಂಸ್ಥೆಗಳು ಇದರಲ್ಲಿ ಪಾಲ್ಗೊಳ್ಳಬಹುದು. ಪ್ರದರ್ಶನ ನೀಡಿದ ಪ್ರತಿ ತಂಡಕ್ಕೆ ರೂ. 5,000/–ಗಳ ಪ್ರೋತ್ಸಾಹ ಧನ ನೀಡಲಾಗುವುದು. ಅಕ್ಟೋಬರ್ 30ರೊಳಗಾಗಿ ಹೆಸರು ನೋಂದಾಯಿಸತಕ್ಕದ್ದು. ಪ್ರತಿ ತಂಡದಲ್ಲಿ ಕನಿಷ್ಠ 6 ಸದಸ್ಯರಿರಬೇಕು ಒಬ್ಬರಿಗೆ ಒಂದು ತಂಡದಲ್ಲಿ ಮಾತ್ರ ಅವಕಾಶ. ಅ

*ಪ್ರಧಾನ ಕಾರ್ಯದರ್ಶಿ*

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH,AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ಅಕ್ಟೋಬರ್ 2014ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ಅಕ್ಟೋಬರ್ 2014ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 26 ಅಕ್ಟೋಬರ್ 2014 ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 26 ಅಕ್ಟೋಬರ್ 2014 ರಂದು ಸಾಯಂಕಾಲ 4 ಗಂಟೆಯಿಂದ.

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 011–26104818



# ಸಾಹಿತ್ಯ ಸಂಜೆಯಲ್ಲಿ ಜಿ.ಎ. ಬಿರಾದಾರ ನೆನಪು




ಇತಿಹಾಸ ತಜ್ಞ ಮತ್ತು ದೆಹಲಿಯ ನ್ಯಾಷನಲ್ ಆರ್ಕೈವ್ ಆಫ್ ಇಂಡಿಯಾದಲ್ಲಿ ವೃತ್ತಿಯಲ್ಲಿದ್ದು 2012ರ ಜೂನ್ ತಿಂಗಳಲ್ಲಿ ಅಗಲಿದ ಡಾ. ಜಿ.ಎ. ಬಿರಾದಾರ ಅವರ ಬದುಕು ಮತ್ತು ಬರವಣಿಗೆಯ ನೆನಪನ್ನು ಮಾಡಿಕೊಳ್ಳುವ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘವು ನಡೆಸುವ ಸಾಹಿತ್ಯ ವೈವಿಧ್ಯದಲ್ಲಿ ಸಪ್ಟಂಬರ್ 5 ರಂದು ಹಮ್ಮಿಕೊಳ್ಳಲಾಯಿತು.

ಹಿರಿಯ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆಯವರು, ಡಾ. ಜಿ.ಎ. ಬಿರಾದಾರ ಅವರ ಬರವಣಿಗೆಯನ್ನು ನೆನಪಿಸಿಕೊಳ್ಳುತ್ತಾ ಬಿರಾದಾರರ ಸಂಶೋಧನಾ ಕೃತಿ 'ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನುಭಂಗ ಚಳುವಳಿ'ಯು ಚರಿತ್ರೆಯನ್ನು ಹೊಸದಾಗಿ ಕಟ್ಟಿ ಕೊಡುವುದು ಎಂದರು. ಜೊತೆಗೆ ಆ ಚಳುವಳಿಯ ಇತರ ಸಂಕೀರ್ಣ ಮುಖಗಳ ಕಡೆಗೆ ನಮ್ಮ ಗಮನ ಸೆಳೆಯುವುದರಿಂದಾಗಿ ಮುಖ್ಯ ಕೃತಿಯಾಗಿದೆ ಎಂದರು. "ಬಿರಾದಾರರು ಭಾರತದ ರಾಷ್ಟ್ರೀಯ ಚಳುವಳಿಯನ್ನು ಸರಳೀಕರಿಸಿ ನೋಡಿಲ್ಲ, ಬದಲು ಈ ಚಳುವಳಿಯು ಇದಿರಿಸುತ್ತಿದ್ದ ಆಂತರಿಕ ಸಮಸ್ಯೆಗಳನ್ನು ಮತ್ತು ಆ ಸಮಸ್ಯೆಗಳನ್ನು ನಮ್ಮ ಚಳುವಳಿಗಾರರು ಬಗೆಹರಿಸಿಕೊಂಡ ಬಗೆಯನ್ನು ಸೂಕ್ಷ್ಮವಾಗಿ ದಾಖಲಿಸಿದ್ದಾರೆ ಎಂಬುದು ನಮಗಿಂದು ಮುಖ್ಯವಾದ ವಿಚಾರವಾಗಿದೆ" ಎಂದರು. ಲೇಖಕರಾದ ಡಾ. ಬಿರಾದಾರರು ತುಂಬ ನಿಸ್ಸಂಕೋಚವಾದ ಹಾದಿಯನ್ನು ಅನುಸರಿಸಿರುವುದೂ ಮೆಚ್ಚತಕ್ಕ ವಿಚಾರವಾಗಿದೆ ಎಂದರು. ಬಿರಾದಾರರ ಸಾವಿನಿಂದ ದೆಹಲಿಯ ಕನ್ನಡ ಚಟುವಟಿಗೆಗಳಿಗೆ ಹಿನ್ನಡೆಯಾಗಿದೆ ಎಂದು ಡಾ. ಬಿಳಿಮಲೆ ಅವರು ವಿಷಾದಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತಾಡುತ್ತಾ "ಡಾ. ಜಿ.ಎ. ಬಿರಾದಾರ ಅವರು ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದು, ಪ್ರತಿಯೊಂದು ಸಾಹಿತ್ಯ ಕಾರ್ಯಕ್ರಮಕ್ಕೆ ತಪ್ಪದೆ ಬರುತ್ತಿದ್ದರು. ಜತೆಗೆ ಸಂಘದ ಮುಖಪತ್ರಿಕೆ ಅಭಿಮತದ ಬೆಳವಣಿಗೆಗೂ ಅವರು ಸಹಕರಿಸಿದ್ದಾರೆ" ಎಂದರು. ಸಂಘದ ಬೆಳವಣಿಗೆಯ ಕುರಿತು ಅವರಲ್ಲಿಯೂ ಹಲವಾರು ಕನಸುಗಳಿದ್ದು ಅವುಗಳನ್ನು ತನ್ನೊಂದಿಗೆ ಹಂಚಿಕೊಂಡಿರುವುದನ್ನು ಶ್ರೀ ಬೆಳ್ಳಾರೆ ಅವರು ಸ್ಮರಿಸಿದರು. ದೊಡ್ಡ ಇತಿಹಾಸಕಾರರಾಗಿ ಅವರು ಉತ್ತಮ ಕೃತಿಗಳನ್ನು ನೀಡಿದರಲ್ಲದೇ ಇತರ ವಿದ್ವಾಂಸರ ಮನ್ನಣೆಗೂ ಅವರು ಪಾತ್ರರಾಗಿದ್ದರು ಎಂದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ವಿ.ವಿ. ಬಿರಾದಾರ ಅವರು ಮಾತಾಡುತ್ತಾ ಜಿ.ಎ. ಬಿರಾದಾರ ಅವರ ದೆಹಲಿ ಬದುಕಿನ ಮತ್ತು ಅವರ ಅಕಸ್ಮಾತ್ ಸಾವಿನ ಕುರಿತು ಮಾತಾಡಿದರು. ಅವರ ಆತ್ಮೀಯ ಪ್ರೀತಿ ಮತ್ತು ಸ್ನೇಹ ಅಪೂರ್ವವಾದುದು ಎಂದರು.

ಲೇಖಕಿ ಶ್ರೀಮತಿ ರೇಣುಕಾ ನಿಡಗುಂದಿ ಅವರು ಮಾತಾಡುತ್ತಾ ಬಿರಾದಾರ ಅವರ ಮುಂಬೈ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿ ಪುಸ್ತಕದ ಮೂಲ ಕರಡುಪ್ರತಿಯನ್ನು ಪ್ರೂಫ್ ರೀಡಿಂಗ್‌ಗಾಗಿ ತಾನು ಓದಿರುವುದನ್ನು ತಿಳಿಸಿದರು. ಸ್ವಾತಂತ್ರ್ಯ ಸಂಗ್ರಾಮದ ಕುರಿತು ನಾವು ಶಾಲೆಯಲ್ಲಿ ಪಠ್ಯ ಓದಿದರೂ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಪಾತ್ರ ಏನು, ಮುಖ್ಯವಾಗಿ ಮಹಿಳೆಯರ ಪಾತ್ರ ಏನು, ಜನಸಾಮಾನ್ಯರ ಪಾತ್ರ ಏನು ಎಂಬುದರ ಬಗ್ಗೆ ನಮಗೆ ಹೆಚ್ಚು ಮಾಹಿತಿ ಡಾ. ಬಿರಾದಾರ್ ಅವರ ಪುಸ್ತಕದಲ್ಲಿ ಸಿಗುತ್ತದೆ ಎಂದು ಶ್ರೀಮತಿ ನಿಡಗುಂದಿ ಅವರು ವಿವರಿಸಿದರು. ಅಭಿಮತಕ್ಕೆ ಅವರು ಇತಿಹಾಸದ ಬಗ್ಗೆ ವಿದ್ವತ್ಪೂರ್ಣವಾದ ಲೇಖನ ಬರೆಯುತ್ತಿದ್ದರು. ಅವರು ಈಗ ನಮ್ಮೊಂದಿಗಿಲ್ಲವಾದರೂ ಅವರ ಕೃತಿಗಳ ಮೂಲಕ ಮತ್ತು ಅವರ ಸಜ್ಜನಿಕೆ ಮೂಲಕ ಅವರು ಅಜರಾಮರವಾಗಿದ್ದಾರೆ ಎಂದು ಶ್ರೀಮತಿ ನಿಡಗುಂದಿ ಅವರು ಹೇಳಿದರು.

ಶ್ರೀ ಚೆನ್ನು ಎಸ್. ಮಠದ ಅವರು ಮಾತಾಡಿ ಡಾ. ಬಿರಾದಾರ ಅವರು ದೆಹಲಿ ಕರ್ನಾಟಕ ಸಂಘ ಮಾತ್ರವಲ್ಲ ಬಸವ ಇಂಟರ್ ನ್ಯಾಶನಲ್ ಸೆಂಟರ್‌ನಲಿಯ್ಯೂ ತುಂಬಾ ಸಕ್ರಿಯರಾಗಿದ್ದರು ಎಂದರು. ಸಂಘದ ಕೋಶಾಧಿಕಾರಿ ಡಾ. ಅವನೀಂದ್ರನಾಥ್ ರಾವ್, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಆನಂದ ಮುರಗೋಡ ಮತ್ತು ಶ್ರೀ ಪಿ.ಸಿ. ಶ್ರೀನಿವಾಸ, ಚಿತ್ರಕಲಾವಿದ ಶ್ರೀ ಸುಧೀರ್ ಫಡ್ನೀಸ್, ರಂಗಕಲಾಕರ್ಮಿ ಶಿವಾನಂದ ಇಂಗಳೇಶ್ವರ ಮೊದಲಾದವರು ಸಭೆಯಲ್ಲಿ ಮಾತಾಡಿದರು. ಅ

*ಅಭಿಮತ ವರದಿ*

# ನಗೆಯ ಅಲೆಯ ಹಿಂದೆ ಭ್ರಷ್ಟ ಮುಖ

ಉದ್ಯೋಗದಲ್ಲಿ ಭಡ್ತಿ ಪಡೆಯಲು ಮೇಲಧಿಕಾರಿಗಳನ್ನು ಸಂತೃಪ್ತಿಗೊಳಿಸುವ ಸಾಧನವಾಗಿ ಸ್ತ್ರೀಯರನ್ನು ಬಳಸಿಕೊಳ್ಳುವ ಕುರಿತು ಅಲ್ಲಿ ಇಲ್ಲಿ ಪಿಸು ಮಾತುಗಳಲ್ಲಿ ಕೇಳಿದ್ದು ಇದೆ. ಆದರೆ ಸಾರ್ವಜನಿಕವಾಗಿ ಇಂತಹ ವಿಚಾರಗಳು ಸುದ್ದಿಯಾಗುವುದು ಕಡಿಮೆ. ಅಲ್ಲದೆ ಈ ಸಂಗತಿಗಳನ್ನು ಚರ್ಚಿಸಿದರೂ ಕೂಡಾ ಮುಜುಗರವನ್ನು ತರಬಲ್ಲದು.

ಇಂತಹ ಒಂದು ಸಂಕೀರ್ಣ ವಸ್ತುವನ್ನು ದೃಶ್ಯ ಮಾಧ್ಯಮದಲ್ಲಿ ತಂದು ಯಶಸ್ವಿಯಾದವರು ನಾಟಕಕಾರ ರಾಜೇಂದ್ರ ಕಾರಂತ. ಕಾರಂತರು ತಮ್ಮ "ಮುದ್ದಣ್ಣನ ಪ್ರಮೋಷನ್ ಪ್ರಸಂಗ" ನಾಟಕದಲ್ಲಿ ಈ ವಸ್ತುವನ್ನು ಹಾಸ್ಯಮಯವಾಗಿ ಪ್ರಸ್ತುತಪಡಿಸಿದ ಕಾರಣ ವಿಷಯದ ಗಂಭೀರತೆ ಗೌಣವಾಗಿ ಸಮಾಜದಲ್ಲಿ ಇರುವ ಭ್ರಷ್ಟ ಮುಖವೊಂದು ಅಸ್ಪಷ್ಟವಾಗಿ ಕಾಣುತ್ತದೆ. ಹಾಸ್ಯದ ಅಲೆಯಲ್ಲಿ ಮಿಂದ ಪ್ರೇಕ್ಷಕ ಮನರಂಜನೆಯಿಂದ ಹೊರಬಂದು ಸಾರ್ಥಕತೆ ಹೊಂದುತ್ತಾನೆ.

ದೆಹಲಿ ಕರ್ನಾಟಕ ಸಂಘದಲ್ಲಿ ಸಪ್ಟೆಂಬರ್ 7ರಂದು ಟಿ.ಎಂ.ಮೈಲಾರಪ್ಪ ಅವರ ನಿರ್ದೇಶನದಲ್ಲಿ ಪ್ರದರ್ಶನಗೊಂಡ ಈ ನಾಟಕ ಹಾಸ್ಯದ ಹೊನಲನ್ನು ಹರಿಸುವಲ್ಲಿ ಯಶಸ್ವಿಯಾಯಿತು.

ನಾಟಕದ ಮುಖ್ಯ ಪಾತ್ರಧಾರಿ ಮುದ್ದಣ್ಣ ತುಂಬಾ ಪ್ರಾಮಾಣಿಕ. ಕಚೇರಿಯಲ್ಲಿ ಕಳಪೆ ನಿರ್ವಹಣೆ ತೋರಿದ ಆತನ ಸಹೋದ್ಯೋಗಿಗೆ ಭಡ್ತಿ ದೊರೆಯುತ್ತದೆ. ಮನೆಯಲ್ಲಿ ಆತನ ಹೆಂಡತಿ ಮತ್ತು ಆಕೆಯ ತಮ್ಮನ ಮೂದಲಿಕೆಯ ಮಾತುಗಳಿಂದ ತಾನೂ ಹೇಗಾದರೂ ಪ್ರಮೋಷನ್ ಪಡೆಯಲು ಆತ ನಿರ್ಧರಿಸುತ್ತಾನೆ.

ಸಹೋದ್ಯೋಗಿಯು ಭಡ್ತಿ ಪಡೆಯಲು ತನ್ನ 'ಸೋಶಿಯಲ್' ಆದ ಹೆಂಡತಿಯ ಸಹಕಾರ ಪಡೆದ ವಿಷಯ ಮುದ್ದಣ್ಣನಿಗೆ ತಿಳಿಯುತ್ತದೆ. ಆದರೆ ಗಯ್ಯಾಳಿಯಾದ ತನ್ನ ಹೆಂಡತಿಯಿಂದ ಈ ಕೆಲಸ ಅಸಂಭವ ಎಂದು ಅರಿತ ಆತನಿಗೆ ಗೆಳೆಯ ಸಿದ್ದು 'ಬಾಡಿಗೆ ಹೆಂಡತಿ'ಯನ್ನು ಪರಿಚಯಿಸುತ್ತಾನೆ. ಹೆಂಡತಿಯನ್ನು ಉಪಾಯದಿಂದ ತವರು ಮನೆಗೆ ಕಳಿಸಿ ಮೇಲಧಿಕಾರಿಯನ್ನು ಮನೆಗೆ ಕರೆತಂದು ಆತನನ್ನು ಖುಷಿ ಪಡಿಸಲು ಯತ್ನಿಸುತ್ತಾನೆ. ಆದರೆ ಆ ದಿನವೇ ಹೆಂಡತಿ ಮರಳಿ ಬಂದು ಎಲ್ಲವೂ ಬಯಲಾಗುತ್ತದೆ. ಪ್ರಮೋಷನ್ ಕನಸು ಕಂಡ ಮುದ್ದಣ್ಣ ಸಸ್ಪೆಂಡ್ ಆಗುತ್ತಾನೆ. ಇದು ನಾಟಕದ ತಿರುಳು.

ನಾಟಕದ ರಚನೆ ಮತ್ತು ಅಲ್ಲಿನ ತಿರುವುಗಳನ್ನು ಹಾಸ್ಯಮಯವಾಗಿ ಬಿಂಬಿಸಲಾಗಿದೆ. ಇದರಿಂದಾಗಿ ಭಡ್ತಿಗಾಗಿ ಸ್ತ್ರೀಯರನ್ನು ಬಳಸಿಕೊಳ್ಳುವ ತಪ್ಪು ಸಂದೇಶವೊಂದು ಮನಸ್ಸಿಗೆ ತೀವ್ರವಾಗಿ ತಟ್ಟುವುದಿಲ್ಲ. ಆದರೆ ಪ್ರೇಕ್ಷಕನಿಗೆ ಇದು ಒಳ್ಳೆಯ ಪ್ರೇರಣೆಯನ್ನು ಒದಗಿಸುವುದಿಲ್ಲ.

ಮುದ್ದಣ್ಣನಾಗಿ ಶ್ಯಾಮ್‌ಸುಂದರ್ ಅವರು ಆತನ ಅಸಹಾಯಕತೆ ಮತ್ತು ನೋವನ್ನು ನುಂಗಿಕೊಳ್ಳುವ ಪರಿಯನ್ನು ಅತ್ಯಂತ ಅಸಹಜವಾಗಿ ಕಾಣಿಸುತ್ತಾರೆ. ನಾಟಕದ ಉದ್ದಕ್ಕೂ ಮುದ್ದಣ್ಣ ಹಾಸ್ಯಕ್ಕೆ ಈಡಾಗುವ ಸನ್ನಿವೇಶವನ್ನು ಸ್ಮರಣೀಯಗೊಳಿಸಿದ್ದಾರೆ. ಹಲವು ತಂತ್ರಗಳನ್ನು ಹೆಣೆದು ಗೆಳೆಯನಿಗೆ ಪ್ರಮೋಶನ್ ಸಿಗಲು ಪ್ರಯತ್ನಿಸುವ ಸಿದ್ದು ಪಾತ್ರದಲ್ಲಿ ಟಿ.ಎಂ. ಮೈಲಾರಪ್ಪ ಅವರು ಮನೋಜ್ಞವಾಗಿ ಅಭಿನಯಿಸಿದ್ದಾರೆ.

'ಬಾಡಿಗೆ ಹೆಂಡತಿ'ಯಾಗಿ ಬರುವ ಮತ್ತು ನಾಟಕದಲ್ಲೂ ರಂಗ ಕಲಾವಿದೆಯಾಗಿ ನಟಿಸಿದ ಶ್ರೀಮತಿ ಆಶಾ ಶ್ಯಾಮಸುಂದರ್ ಹಾಗೂ ಆಕೆಯ ನಾಟಕದಲ್ಲಿನ ಸಹಕಲಾವಿದನಾಗಿ ಕಾಣಿಸಿಕೊಳ್ಳುವ ಎ.ಟಿ.ಶ್ರೀನಿವಾಸ್ ಅವರು ದೃಶ್ಯವನ್ನು ರಂಜನೀಯಗೊಳಿಸಿದ್ದಾರೆ. ನಾಳೆಯ ತಮ್ಮ 'ಕುರುಕ್ಷೇತ್ರ' ನಾಟಕಕ್ಕೆ ತಯಾರಾಗಬೇಕೆನ್ನುವ ಬದ್ಧತೆಯನ್ನು ತೋರಿಸುವ ಕಲಾವಿದನಾಗಿ ಶ್ರೀನಿವಾಸ್ ಅವರ ನಟನೆ ಸಹಜವಾಗಿ ಮೂಡಿಬಂದಿದೆ.

ಮುದ್ದಣ್ಣನ ಹೆಂಡತಿಯಾಗಿ ಶ್ರೀಮತಿ ಸುಜಾತ ಪ್ರಸನ್ನ, ಆಕೆಯ ತಮ್ಮನಾಗಿ ಬಿ.ನಾರಾಯಣ, ಮೇಲಧಿಕಾರಿಯಾಗಿ ದಿಲೀಪ್ ಬಾಪಟ್, ಮುದ್ದಣ್ಣನ ಸಹೋದ್ಯೋಗಿಯಾಗಿ ರಾಜಣ್ಣ ಬಿರಾದಾರ, ಶಿವಪ್ಪ ಮೊದಲಾದವರು ಈ ನಗೆ ನಾಟಕ ಸದಾ ನೆನಪಿನಲ್ಲಿ ಉಳಿಯುವಂತೆ ಮಾಡಿದ್ದಾರೆ. ಅ

***ಡಾ.ವೈ.ಅವನೀಂದ್ರನಾಥ್ ರಾವ್***





# ಮುದ್ದಣ್ಣನ ಪ್ರಮೋಶನ್ ಪ್ರಸಂಗ

"ದೆಹಲಿ ಫ್ರೆಂಡ್" ಇವರು ಅರ್ಪಿಸಿದ ಶ್ರೀ ರಾಜೇಂದ್ರ ಕಾರಂತ ವಿರಚಿತ "ಮುದ್ದಣ್ಣನ ಪ್ರಮೋಶನ್ ಪ್ರಸಂಗ"ವು ಶ್ರೀ ಟಿ.ಎಂ. ಮೈಲಾರಪ್ಪನವರ ನಿರ್ದೇಶನ ಹಾಗು ಶ್ರೀಮತಿ ಆಶಾ ಶ್ಯಾಮಸುಂದರ್‌ರವರ ನಿರ್ವಹಣೆಯಿಂದಾಗಿ ಪ್ರೇಕ್ಷಕರನ್ನು ರಂಜಿಸುವಲ್ಲಿ ಯಶಸ್ವಿಯಾಯಿತು. ನಾಟಕದ ಕಥಾವಸ್ತು ಹಾಸ್ಯಪ್ರದಾನವಾದುದಾಗಿತ್ತು. ಮುದ್ದಣ್ಣನ ಪಾತ್ರದಾರಿ ಶ್ರೀ ಶ್ಯಾಮಸುಂದರ್ ತಮ್ಮ ವಿಭಿನ್ನ ಅಭಿನಯದಿಂದ ಜನಮನ ಸೂರೆಗೊಳಿಸಿದರು. ಗಯ್ಯಾಳಿ ಹೆಂಡತಿಯಾಗಿ ಶ್ರೀಮತಿ ಸುಜಾತ ಸುಪ್ರಸನ್ನರವರ ನಟನಾ ಪ್ರತಿಭೆಯಾ ಅರಿವು ದೆಹಲಿ ಕನ್ನಡಿಗರಿಗೆ ಗೊತ್ತಾಯಿತು. ನಟನೆ ಮತ್ತು ನಿರ್ದೇಶನದಲ್ಲಿ ಸಾಧನೆಗೈದಿರುವ ಶ್ರೀ ಮೈಲಾರಪ್ಪ ಲೀಲಾಜಾಲವಾಗಿ ತಮ್ಮ ಪಾತ್ರದಲ್ಲಿ ಜನರನ್ನು ರಂಜಿಸಿದರು. ಎ.ಟಿ. ಶ್ರೀನಿವಾಸರು ಅವರಿಗಿತ್ತ ಪಾತ್ರವನ್ನು ಎಂದಿನಂತೆ ಪ್ರಭಾವಶಾಲಿ ಶೈಲಿಯಲ್ಲೆಯೇ ನಿರ್ವಹಿಸಿದರು. ಸೂತ್ರದಾರ, ಮೊದಲನೇ ಗುಮಾಸ್ತ, ಮ್ಯಾನೇಜರ್, ಇನ್ನಿತರ ಪಾತ್ರಗಳಲ್ಲಿ ಚಾಕಚಕ್ಯತೆಯಿಂದ ವೇಷ ಬದಲಿಸಿ ಕಾಣಿಸಿಕೊಂಡ ಶ್ರೀ ನಾರಾಯಣ್ ಉತ್ತಮ ಅಬಿನಯ ನೀಡಿದರು.

ಕುಡುಕನ ಅಭಿನಯ ಚೆನ್ನಾಗಿ ನೀಡಿದ ಶ್ರೀ ಬಿರಾದಾರ್ ಅಭಿನಂದನೆಗೆ ಅರ್ಹ ಎನಿಸಿದರೂ ನೈಜತೆ ತರುವುದಕ್ಕಾಗಿ ನಿಜವಾದ ಕೈಲಾಸ ಬಾರ್‌ನ ವಿವಿದ ಬ್ರಾಂಡ್ ರಂಗದ ಮೇಲೆ ಪ್ರದರ್ಶಿಸುವ ಅಗತ್ಯತೆ ಇರಲಿಲ್ಲ ಎಂಬುದು ನನ್ನ ಅನಿಸಿಕೆ. ಪರದೆಯ ಹಿಂದೆ ಧ್ವನಿಗಳ ಮೂಲಕ ಬಾರ್ ಸೃಷ್ಟಿಸಿ ರಂಗದ ಮೇಲೆ ಅಮಲಿನ ಅಭಿನಯ ಸಾಕಾಗಿತ್ತು. ನನ್ನ ಪಕ್ಕದಲ್ಲಿಯೇ ಕುಳಿತು ನಾಟಕ ವೀಕ್ಷಿಸುತ್ತಿದ್ದ ಶ್ರೀ ಬಿರಾದಾರ್ ರ ಮಗಳು ಅಪ್ಪ ಏನು ಕುಡೀತಾ ಇದ್ದಾರೆ ಎಂದು ಕೇಳಿದಾಗ ಉತ್ತರಿಸಲಾಗದ ಹಿರಿಯರ ಮುಖ ಗಮನಿಸಿದ ನಾನು ಈ ವಾಕ್ಯ ಬರೆದಿದ್ದೇನೆ.

ಇನ್ನು, ಸೂತ್ರದಾರನ ಪದೇ ಪದೇ ಬರುವಿಕೆ ಬೇಸರ ತರಿಸಿತು. ಸೂತ್ರದಾರನೇ ನಾಟಕ ಮುಗಿಸುವಂತೆ ಮಾಡಿದ್ದರೆ ಚೆನ್ನಾಗಿತ್ತೇನೋ, ಏಕೆಂದರೆ ವೀಕ್ಷಕರಿಗೆ ನಾಟಕ ಇನ್ನೂ ಇದೆಯೇನೂ ಎಂದು ಅಂದುಕೊಳ್ಳುವಂತೆ ಮಾಡಿತು.

ಒಟ್ಟಾರೆ ಹೇಳುವುದಾದರೆ, ದೆಹಲಿಯ ಬಿಡುವಿಲ್ಲದ ಜೀವನದ ಮದ್ಯ ಹವ್ಯಾಸಿ ಕಲಾವಿದರು ತಂಡ ಕಟ್ಟಿ ರಂಗತಾಲೀಮು ನಡೆಸಿ ಇಂತಹ ನಾಟಕ ನೀಡಿದುದಕ್ಕೆ ತಂಡದ ಸರ್ವರೂ ಅಭಿನಂದನೆಗೆ ಅರ್ಹರೆ. ಅ

***ಜಮುನಾ ಚೆನ್ನು ಮಠದ***



# ದೆಹಲಿ ಕರ್ನಾಟಕ ಸಂಘದಲ್ಲಿ ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ಸನ್ಮಾನ

ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿ ಅವರಿಂದ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದ ಕರ್ನಾಟಕದ 14 ಶಿಕ್ಷಕರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಸಂಘದಲ್ಲಿ ನಡೆದ ಸಮಾರಂಭದಲ್ಲಿ ಸೆಪ್ಟಂಬರ್ 5ರಂದು ಅಭಿನಂದಿಸಲಾಯಿತು. ಅಭಿನಂದನಾ ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ವಹಿಸಿದ್ದರು.

ಕರ್ನಾಟಕದ ವಿವಿಧ ಜಿಲ್ಲೆಗಳಿಂದ ರಾಷ್ಟ್ರಪ್ರಶಸ್ತಿಗೆ ಆಯ್ಕೆಯಾದ ಶಿಕ್ಷಕ–ಶಿಕ್ಷಕಿಯರಲ್ಲಿ ಕನ್ನಡ ಭಾಷೆಯ ಜತೆಗೆ ಉರ್ದು ಮತ್ತು ತೆಲುಗು ಭಾಷೆಯ ಶಿಕ್ಷಕರೂ ಪುರಸ್ಕೃತಗೊಂಡಿರುವುದು ಸಂತಸದ ವಿಚಾರವಾಗಿದೆ ಎಂದು ಶ್ರೀ ಬೆಳ್ಳಾರೆ ಅವರು ನುಡಿದರು. ಕರ್ನಾಟಕವು ತನ್ನ ಎಲ್ಲ ವೈವಿಧ್ಯತೆಗಳನ್ನು ಸ್ವೀಕರಿಸಿಕೊಂಡು ಅತ್ಯಂತ ಸಮೃದ್ಧ ನಾಡಾಗಿ ಬೆಳೆಯಲು ರಾಷ್ಟ್ರಪ್ರಶಸ್ತಿಯನ್ನು ಪಡೆದಂತಹ ಶಿಕ್ಷಕರ ಕೊಡುಗೆ ಅಪಾರವಾದುದು. ಇಂತಹ ಕೆಲಸಗಳು ಇನ್ನು ಹೆಚ್ಚು ನಡೆಯಲಿ ಎಂದು ಅವರು ಆಶಯ ವ್ಯಕ್ತಪಡಿಸಿದರು.

ಆರಂಭದಲ್ಲಿ ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ಪುಷ್ಪಗುಚ್ಛ ಹಾಗೂ ದೆಹಲಿ ಕರ್ನಾಟಕ ಸಂಘದ ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು.

ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರಲ್ಲಿ ಶ್ರೀಮತಿ ಸೂರ್ಯಭಾನು, ಶ್ರೀ ರತ್ನಾ ಕಾರಿಯಪ್ಪ, ಶ್ರೀ ಪದ್ಮ ಬಿ. ಹುಂಬಿ, ಶ್ರೀ ಲಕ್ಷ್ಮೀಕಾಂತ ಭಟ್, ಶ್ರೀ ಬಸರಾಜಪ್ಪ ಡಿ.ಟಿ., ಶ್ರೀ ಎಂ. ವೆಂಕಟರಮಣಪ್ಪ, ಶ್ರೀ ಗಜಾನನ ಹೆಗಡೆ, ಶ್ರೀ ಎನ್. ವೆಂಕಟರಮಣಪ್ಪ, ಶ್ರೀ ಬಲವಂತರಾವ್ ಘಡ್ರೆ ಮುಂತಾದವರು ಮಾತನಾಡಿದರು. “ರಾಷ್ಟ್ರ ರಾಜಧಾನಿಯಲ್ಲಿ ಅತ್ಯಂತ ಅದ್ಭುತವಾಗಿ ಬೆಳೆದು ನಿಂತಿರುವ ದೆಹಲಿ ಕರ್ನಾಟಕ ಸಂಘದಲ್ಲಿ ಸಿಕ್ಕಿದ ಎಲ್ಲರ ಒಡನಾಟ ಮತ್ತು ಸನ್ಮಾನ ರಾಷ್ಟ್ರಪ್ರಶಸ್ತಿ ಸ್ವೀಕರಿಸುವುದಕ್ಕಿಂತಲೂ ಹೆಚ್ಚಿನ ಸಂತೋಷವನ್ನು ನೀಡಿದೆ. ನಾವು ನಮ್ಮ ತವರೂರಿನಲ್ಲಿ ಸನ್ಮಾನ ಸ್ವೀಕರಿಸುತ್ತಿರುವಷ್ಟು ಆನಂದವಾಗುತ್ತಿದೆ” ಎಂದು ಅವರೆಲ್ಲರೂ ದನಿ ಸೇರಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಕರ್ನಾಟಕ ರಾಜ್ಯ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀ ಕೃಷ್ಣಪ್ಪನವರು ಮಾತನಾಡಿ ಸನ್ಮಾನ ಕಾರ್ಯಕ್ರಮದ ಬಗ್ಗೆ ಹರ್ಷ ವ್ಯಕ್ತಪಡಿಸಿದರು. ದೆಹಲಿ ಕರ್ನಾಟಕ ಸಂಘದ ಕೋಶಾಧಿಕಾರಿ ಡಾ. ಅವನೀಂದ್ರನಾಥ್ ರಾವ್ ಅವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತಾಡಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಸಂಘದ ಚಟುವಟಿಕೆಗಳ ಕುರಿತು ಮಾತಾಡಿ ವಂದನಾರ್ಪಣೆ ಮಾಡಿದರು. ಶ್ರೀ ಚಂದ್ರಶೇಖರ್ ಅವರು ಕಾರ್ಯಕ್ರಮ ನಿರೂಪಿಸಿದರು.

ಅತ್ಯಂತ ಅರ್ಹರಾದ ಶಿಕ್ಷಕರನ್ನು ಸಾರ್ವಜನಿಕವಾಗಿ ಗುರುತಿಸಿ ಗೌರವಿಸುವ ಈ ರಾಷ್ಟ್ರಪ್ರಶಸ್ತಿಯು ಒಂದು ಅರ್ಹತಾ ಪತ್ರ, ಬೆಳ್ಳಿಯ ಪದಕ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳ ನಗದು ಬಹುಮಾನವನ್ನು ಒಳಗೊಂಡಿರುತ್ತದೆ. ಶೈಕ್ಷಣಿಕ ದಕ್ಷತೆ, ಶಿಕ್ಷಣದಲ್ಲಿ ಸುಧಾರಣೆ, ವಿದ್ಯಾರ್ಥಿಗಳ ಮೇಲೆ ಪ್ರೀತಿ ಮತ್ತು ಅಪ್ಪಟ ಆಸಕ್ತಿ, ಸಾಮಾಜಿಕ ಜೀವನದಲ್ಲಿ ಪಾಲ್ಗೊಳ್ಳುವಿಕೆ ಮತ್ತು ಸ್ಥಳೀಯ ಸಮುದಾಯದಲ್ಲಿ ದೊರೆಯುವ ಗೌರವವನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಲಾಗುವುದು.

ಇದೇ ಕಾರ್ಯಕ್ರಮದಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಿಂದ ವಿದ್ಯಾರ್ಥಿವೇತನ ಸ್ವೀಕರಿಸಲು ದೆಹಲಿಗೆ ಬಂದಿದ್ದ ಸಾಂಸ್ಕೃತಿಕ ಕಲಾತಂಡದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾವಗೀತೆ ಮತ್ತು ಜನಪದಗೀತೆಗಳನ್ನು ಹಾಡಿದರು. ಕಾರ್ಯಕ್ರಮಕ್ಕೆ ಹೆಚ್ಚಿನ ಮೆರುಗು ತುಂಬಿದರು. ಅ

*ಅಭಿಮತ ವರದಿ*




## ಬದಲಾವಣೆ

ಕವನ

ಇಡೀ ವಿಶ್ವವೇ ಒಂದು ಬದಲಾವಣೆ
ಸದಾ ಹರಿಯುವ ನದಿ ನೀರಿನಂತೆ
ಹಗಲು–ರಾತ್ರಿ ಬಿಸಿಲು–ಮಳೆ
ಗಾಳಿ–ಚಳಿ ಚಿಗುರು–ಹೂವು–ಹಣ್ಣು
ಹುಟ್ಟು–ಬೆಳೆ ಬಾಳು–ಸಾವು
ಬದುಕಿನುದ್ದಕ್ಕು ಅದೆಷ್ಟೋ
ಆಗು–ಹೋಗುಗಳು ನಿನ್ನೆ–ಇಂದು
ನಾಳೆಯ ಸರಪಳಿ ಕಡಿದಾಗ
ತಾನಾಗಿಯೇ ಅಂಟಿಕೊಳ್ಳುವ
ಅಚ್ಚರಿ ! ಎಸೆತಕ್ಕೆ ಪ್ರತಿ ಎಸೆತ
ಹೊಸತನ್ನು ಕಂಡು ಹಿಡಿಯುವ
ತವಕ ಮುಳುಗಿ ಹೋದದ್ದನ್ನು
ಕಳೆದುಕೊಂಡದ್ದನ್ನು ಅರಸಿ
ಪರೀಕ್ಷಿಸಿ ಪರಿಸ್ಕರಿಸುವ ಪ್ರಯತ್ನ
ನಿಂತದನ್ನು ಕೆಡಹುವ ಹಠ ಈ
ಸಿಹಿ–ಕಹಿ ಸಾವು–ನೋವುಗಳ
ನಡುವೆ ನಿರ್ಮಿಸುವ ಅನುಭವಿಸುವ
ಆಸೆ–ಆಕಾಂಕ್ಷೆಗಳ ಹಾವು–ಏಣಿ ಆಟ
ಬದಲಾವಣೆವೊಂದೇ ಶಾಶ್ವತ

***ಸಖಾರಾಮ ಉಪ್ಪೂರು***



# ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಕೆಬಿಎಲ್ ಯುನೈಟೆಡ್‌ಗೆ ಪ್ರಶಸ್ತಿ

ಕರ್ಣಾಟಕ ಬ್ಯಾಂಕ್‌ನಲ್ಲಿ ವೃತ್ತಿಯಲ್ಲಿರುವ ಯುವಕರ ಕ್ರಿಕೆಟ್ ತಂಡ ಕೆಬಿಎಲ್ ಯುನೈಟೆಡ್ ದೆಹಲಿ ಕರ್ನಾಟಕ ಸಂಘವು ಏರ್ಪಡಿಸಿದ 2014–15ನೇ ಸಾಲಿನ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

ಹನ್ನೊಂದು ತಂಡಗಳನ್ನೊಳಗೊಂಡ ಈ ಸಾಲಿನ ಕ್ರಿಕೆಟ್ ಪಂದ್ಯಾವಳಿಯು ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಹಳೇ ಕ್ಯಾಂಪಸ್‌ನಲ್ಲಿರುವ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ವಿಶೇಷ ಕರ್ತವ್ಯ ಗುಂಪಿನ ಮೈದಾನದಲ್ಲಿ ಸಪ್ಟಂಬರ್ 21, 27 ಮತ್ತು ಅಕ್ಟೋಬರ್ 2ರಂದು ನಡೆಯಿತು. ನಾಕೌಟ್ ಕ್ರಮದಲ್ಲಿ ನಡೆದ ಪಂದ್ಯಾವಳಿಯ ಅಂತಿಮ ಪಂದ್ಯವು ಸೌತ್ ಕೆನರಾ ತಂಡ ಮತ್ತು ಕೆಬಿಎಲ್ ಯುನೈಟೆಡ್ ತಂಡದ ಜತೆ ನಡೆಯಿತು.

ಪಂದ್ಯದ ಆರಂಭದಲ್ಲಿ ಬ್ಯಾಟಿಂಗ್ ಮಾಡಿದ ಸೌತ್ ಕೆನರಾ ತಂಡವು ತಂಡದ ಆಲ್‌ರೌಂಡರ್ ಪ್ರದೀಪ್ ಕುಮಾರ್ (57 ನಾಟೌಟ್) ಅವರ ಭರ್ಜರಿ ಬ್ಯಾಟಿಂಗ್‌ನಿಂದ ಕೆಬಿಎಲ್ ಯುನೈಟೆಡ್ ತಂಡಕ್ಕೆ ಫೈನಲ್‌ನಲ್ಲಿ ಜಯ ಸಾಧಿಸಲು 97ರನ್‌ಗಳ ಗುರಿಯನ್ನು ನೀಡಿತು. ಕೊನೆಯವರೆಗೂ ರೋಮಾಂಚನಕಾರಿಯಾಗಿದ್ದ ಈ ಪಂದ್ಯವು ಕೆಬಿಎಲ್ ಯುನೈಟೆಡ್ ತಂಡದ ನಾಯಕ ಪೂರ್ಣಪ್ರಜ್ಞಾ ಅವರ ಬ್ಯಾಟಿಂಗ್‌ನಿಂದಾಗಿ ಆ ತಂಡವು ಜಯ ಸಾಧಿಸಿ 2014–15ನೇ ಸಾಲಿನ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಪೂರ್ಣಪ್ರಜ್ಞಾ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು.



ಇದೇ ಸಂದರ್ಭದಲ್ಲಿ ಹಾಜರಿದ್ದ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಈ ಕ್ರಿಕೆಟ್ ಪಂದ್ಯಾವಳಿಯು ತುಂಬಾ ಶಾಂತರೀತಿಯಲ್ಲಿ ನಡೆದುದಕ್ಕೆ ಎಲ್ಲ ಕ್ರೀಡಾಳುಗಳಿಗೆ, ಕ್ರೀಡಾ ಸಮಿತಿಯ ಸಂಚಾಲಕತ್ವವನ್ನು ವಹಿಸಿದ ಶ್ರೀ ಟಿ.ಪಿ. ಬೆಳ್ಳಿಯಪ್ಪ ಸದಸ್ಯರುಗಳಾದ ಶ್ರೀ ಶಿವರಾಮ ರೈ ಹಾಗೂ ಶ್ರೀ ಪ್ರದೀಪ್ ಕುಮಾರ್ ಅವರಿಗೆ ಧನ್ಯವಾದಗಳನ್ನು ಅರ್ಪಿಸಿ ಪಂದ್ಯ ಪುರುಷೋತ್ತಮ ಪ್ರಶಸ್ತಿ ಹಾಗೂ ರೋಲಿಂಗ್ ಶೀಲ್ಡ್ ನೀಡಿದರು.



ಅದೇ ದಿನ ನಡೆದ ಮೊದಲ ಸೆಮಿಫೈನಲ್ ಕೆಬಿಎಲ್ ಯುನೈಟೆಡ್ ಮತ್ತು ಹೊಯ್ಸಳ ಕ್ರಿಕೆಟರ್ಸ್, ಗುರ್‌ಗಾಂವ್ ಜೊತೆಗೆ ನಡೆಯಿತು. ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಕೆಬಿಎಲ್ ಯುನೈಟೆಡ್ ತಂಡವು ಹೊಯ್ಸಳ ಕ್ರಿಕೆಟರ್ಸ್ ತಂಡದಿಂದ ಜಯಸಾಧಿಸಲು 71 ರನ್‌ಗಳ ಗುರಿಯನ್ನು ಪಡೆಯಿತು. ಈ ಗುರಿಯನ್ನು ರಾಘವೇಂದ್ರ ರಾವ್ ಅವರ ಅದ್ಭುತ ಬ್ಯಾಟಿಂಗ್ ಪ್ರದರ್ಶನದಿಂದ ಕೇವಲ ಎರಡು ವಿಕೆಟುಗಳನ್ನು ಕಳೆದುಕೊಂಡು ಕೆಬಿಎಲ್ ತಂಡವು ಫೈನಲ್ ಪ್ರವೇಶ ಮಾಡಿತು. ರಾಘವೇಂದ್ರ ರಾವ್ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಎರಡನೇ ಸೆಮಿಫೈನಲ್, ಬೆಳ್ಳಿಯಪ್ಪಾಸ್ ಗ್ರೂಪ್ ಮತ್ತು ಸೌತ್ ಕೆನರಾ ತಂಡದ ಜೊತೆಗೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಬೆಳ್ಳಿಯಪ್ಪಾಸ್ ಗ್ರೂಪ್ ತಂಡವು 12 ಓವರ್‌ಗಳಲ್ಲಿ ಕೇವಲ 70ರನ್‌ಗಳನ್ನು ಗಳಿಸಿತು. ಶೈನ್ ಅವರ ಉತ್ತಮ ಬ್ಯಾಟಿಂಗ್ ಪ್ರದರ್ಶನದಿಂದ ಸೌತ್ ಕೆನರಾ ತಂಡವು ಏಳು ವಿಕೆಟುಗಳಿಂದ ಜಯಗಳಿಸಿ ಫೈನಲ್ ಪ್ರವೇಶಿಸಿತು. ಶೈನ್ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಸಪ್ಟಂಬರ್ 21ರಂದು ಮೊದಲ ಸುತ್ತಿನ ಪಂದ್ಯದಲ್ಲಿ ಸೌತ್ ಕೆನರಾ–ಎ ತಂಡ ಮತ್ತು ದೆಹಲಿ ಒಕ್ಕಲಿಗ ಗೌಡ ಸಂಘ ತಂಡಗಳ ನಡುವೆ ನಡೆದ ಪಂದ್ಯದಲಿ ಸೌತ್ ಕೆನರಾ–ಎ ತಂಡವು ಮೊದಲು ಬ್ಯಾಟಿಂಗ್ ಮಾಡಿ ದೆಹಲಿ ಒಕ್ಕಲಿಗ ಗೌಡ ಸಂಘಕ್ಕೆ ತಂಡಕ್ಕೆ ಜಯಗಳಿಸಲು 61ರನ್‌ಗಳ ಲಕ್ಷ್ಯವನ್ನು ನೀಡಿತು. ದೆಹಲಿ ಒಕ್ಕಲಿಗ ಗೌಡ ಸಂಘವು ಏಳು ವಿಕೆಟುಗಳಿಂದ ಜಯ ಸಾಧಿಸಿತು. ಸಚಿನ್ ಗೌಡ ಅವರು ಪಂದ್ಯ ಪುರುಷೋತ್ತಮ ಪ್ರಶಸ್ತಿಗೆ ಪಾತ್ರರಾದರು.

ಎರಡನೇ ಪಂದ್ಯದಲ್ಲಿ ಸೌತ್ ಕೆನರಾ ಹಾಗೂ ಚಾಲುಕ್ಯ ಕ್ರಿಕೆಟರ್ಸ್, ಗುರ್‌ಗಾಂವ್ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಚಾಲುಕ್ಯ ಕ್ರಿಕೆಟರ್ಸ್ ಸೌತ್ ಕೆನರಾ ತಂಡಕ್ಕೆ 37ರನ್‌ಗಳ ಲಕ್ಷ್ಯವನ್ನು ನೀಡಿತು. ಸೌತ್ ಕೆನರಾ ತಂಡವು ಕೇವಲ 4.1 ಓವರ್‌ಗಳಲ್ಲಿ ಈ ಲಕ್ಷ್ಯವನ್ನು ಮುಟ್ಟುವಲ್ಲಿ ಸಫಲವಾಯಿತು. ರಾಘವ ಶರ್ಮಾ ಅವರು ಪಂದ್ಯ ಪುರುಷೋತ್ತಮರಾದರು.

ಮೂರನೇ ಪಂದ್ಯವು ಕೆ.ಬಿ.ಎಲ್. ಫೈಟರ್ಸ್ ಮತ್ತು ಸೌಥಿ ತಂಡದ ನಡುವೆ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಸೌಥಿ ತಂಡವು ಕೆ.ಬಿ.ಎಲ್. ಫೈಟರ್ಸ್‌ಗೆ 72ರನ್‌ಗಳ ಲಕ್ಷ್ಯವನ್ನು ನೀಡಿತು. ಕೆ.ಬಿ.ಎಲ್. ಫೈಟರ್ಸ್ 5 ವಿಕೆಟುಗಳಿಂದ ಜಯಗಳಿಸಿತು. ಪಂದ್ಯ ಪುರುಷೋತ್ತಮ ಪ್ರಶಸ್ತಿಯನ್ನು ಪ್ರಭಾಸ್ ಗಳಿಸಿದರು.

ನಾಲ್ಕನೇ ಪಂದ್ಯದಲ್ಲಿ ಕೆ.ಬಿ.ಎಲ್. ಯುನೈಟೆಡ್ ಹಾಗೂ ಜೆ.ಎಸ್.ಎಸ್. ಆರ್.ಡಬ್ಲ್ಯು.ಎ.–ಎ ತಂಡಗಳ ನಡುವೆ ನಡೆದು ಕೆ.ಬಿ.ಎಲ್. ಯುನೈಟೆಡ್ ತಂಡವು 51ರನ್‌ಗಳಿಂದ ಜಯ ಗಳಿಸಿತು. ಕೆ.ಬಿ.ಎಲ್. ಯುನೈಟೆಡ್ ತಂಡದ ತಂಡದ ನಾಯಕ ಪೂರ್ಣಪ್ರಜ್ಞಾ ಅವರು  ಪಂದ್ಯಪುರುಷೋತ್ತಮ ಪ್ರಶಸ್ತಿಗೆ ಪಾತ್ರರಾದರು.

ಕಳೆದ ಬಾರಿಯ ಅಂಬಿಕೇಶ್ ಸ್ಮಾರಕ ಟ್ರೋಫಿ ಪಡೆದ ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ಮತ್ತು ದೆಹಲಿ ಒಕ್ಕಲಿಗ ಗೌಡ ಸಂಘದ ಜೊತೆ ಸಪ್ಟಂಬರ್ 27ರಂದು ನಡೆದ ಪಂದ್ಯದಲ್ಲಿ ಹೊಯ್ಸಳ ಕ್ರಿಕೆಟರ್ಸ್ ಜಯ ಸಾಧಿಸಿತು. ಪುರುಷೋತ್ತಮ ಅವರು ಪಂದ್ಯ ಶ್ರೇಷ್ಠರಾದರು.

ನಂತರ ಸೌತ್ ಕೆನರಾ ಮತ್ತು ಜೆ.ಎಸ್.ಎಸ್. ಆರ್.ಡಬ್ಲ್ಯು.ಎ ತಂಡದ ನಡುವೆ ನಡೆಯಿತು. ಟಾಸ್ ಗೆದ್ದ ಸೌತ್ ಕೆನರಾ ಫೀಲ್ಡಿಂಗ್ ಆಯ್ಕೆ ಮಾಡಿತು. ಮೊದಲು ಬ್ಯಾಟಿಂಗ್ ಮಾಡಿದ ಜೆ.ಎಸ್.ಎಸ್. ಆರ್.ಡಬ್ಲ್ಯು.ಎ ತಂಡ ಸೌತ್ ಕೆನರಾ ತಂಡಕ್ಕೆ ಸೆಮಿಫೈನಲ್ ತಲುಪಲು 78ರನ್‌ಗಳ ಗುರಿಯನ್ನು ನೀಡಿತು. ಸೌತ್ ಕೆನರಾ ತಂಡವು ಜಯ ಸಾಧಿಸಿತು. ಪ್ರೇಮನಾಥ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಮುಂದಿನ ಪಂದ್ಯವು ಕೆಬಿಎಲ್ ಫೈಟರ್ಸ್ ಹಾಗೂ ಬೆಳ್ಳಿಯಪ್ಪ ಗ್ರೂಪ್ಸ್ ನಡುವೆ ನಡೆಯಿತು. ಟಾಸ್ ಗೆದ್ದ ಬೆಳ್ಳಿಯಪ್ಪಾಸ್ ಗ್ರೂಪ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡು ಕೆಬಿಎಲ್ ಫೈಟರ್ಸ್ ತಂಡದಿಂದ ಜಯ ಸಾಧಿಸಲು 63ರನ್‌ಗಳ ಲಕ್ಷ್ಯವನ್ನು ನೀಡಿತು. ಕೇವಲ 7.5 ಓವರ್‌ಗಳಲ್ಲಿ ಅದ್ಭುತವಾದ ಬ್ಯಾಟಿಂಗ್ ಪ್ರದರ್ಶನ ನೀಡಿ ಬೆಳ್ಳಿಯಪ್ಪಾಸ್ ಗ್ರೂಪ್ಸ್ ತಂಡವು ಸೆಮಿಫೈನಲ್ ಹಂತವನ್ನು ಮುಟ್ಟಿತು. ಜೆ.ಜಿ. ಗೋರೆ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು. ಅ

***ಅಭಿಮತ ವರದಿ***

# ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು

ದೆಹಲಿ ಕರ್ನಾಟಕ ಸಂಘದ 2014–15ನೇ ಸಾಲಿನ ಅಂಬಿಕೇಶ್ ಕ್ರಿಕೆಟ್ ಪಂದ್ಯಾವಳಿ, ವಿವಿಧ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು ಸೆಪ್ಟೆಂಬರ್ 20, 21, 27 ಮತ್ತು ಅಕ್ಟೋಬರ್ 2,3,4, ಹಾಗು 5, 2014ರಂದು ದೆಹಲಿ ಕರ್ನಾಟಕ ಸಂಘ ಮತ್ತು ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಹಳೇ ಕ್ಯಾಂಪಸ್‌ನಲ್ಲಿರುವ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ವಿಶೇಷ ಕರ್ತವ್ಯ ಗುಂಪಿನ ಮೈದಾನದಲ್ಲಿ ನಡೆಯಿತು.

ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಹಳೇ ಕ್ಯಾಂಪಸ್‌ನ ಮೈದಾನದಲ್ಲಿ ನಡೆದ ವಿವಿಧ ಆಟೋಟ ಸ್ಪರ್ಧೆಗಳನ್ನು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಕ್ರೀಡಾ ಸಮಿತಿಯ ಸಂಚಾಲಕ ಶ್ರೀ ಟಿ.ಪಿ. ಬೆಳ್ಳಿಯಪ್ಪ, ಕ್ರೀಡಾ ಸಮಿತಿಯ ಸದಸ್ಯ ಶ್ರೀ ಶಿವರಾಮ ರೈ, ಶ್ರೀ ಪ್ರದೀಪ್ ಕುಮಾರ್, ಶ್ರೀ ತ್ಯಾಗೇಶ್ ಮೂರ್ತಿ ಅವರು ಶಿಸ್ತುಬದ್ಧವಾಗಿ ನಡೆಸಿಕೊಟ್ಟರು.

ಅಕ್ಟೋಬರ್ 5ರಂದು ನಡೆದ ರಂಗೋಲಿ ಹಾಗೂ ಕ್ವಿಜ್ ಸ್ಪರ್ಧೆಯನ್ನು ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತ ಮತ್ತು ಕೋಶಾಧಿಕಾರಿ ಡಾ. ಅವನೀಂದ್ರನಾಥ್ ರಾವ್, ಸ್ಮರಣ ಶಕ್ತಿ ಪರೀಕ್ಷೆಯನ್ನು ಶ್ರೀ ವಿ.ವಿ. ಬಿರಾದಾರ, ಡ್ರಾಯಿಂಗ್ ಸ್ಪರ್ಧೆಯನ್ನು ಶ್ರೀ ಆನಂದ ಈಶ್ವರಪ್ಪ ಮುರಗೋಡ, ಭಕ್ತಿ ಗೀತೆ, ಭಾವಗೀತೆ, ಕನ್ನಡ ರೈಮ್ಸ್, ಫ್ಯಾನ್ಸಿ ಡ್ರೆಸ್ ಸ್ಪರ್ಧೆಗಳನ್ನು ಶ್ರೀ ಪಿ.ಸಿ. ಶ್ರೀನಿವಾಸ, ಚೆಸ್ ಮತ್ತು ಕೇರಂ ಸ್ಪರ್ಧೆಗಳನ್ನು ಶ್ರೀ ಟಿ.ಪಿ. ಬೆಳ್ಳಿಯಪ್ಪ, ಶ್ರೀ ಶಾಂತಕುಮಾರ್ ಎಸ್.ಜೆ. ಮತ್ತು ಶ್ರೀ ತ್ಯಾಗೇಶ್ ಮೂರ್ತಿ ಅವರುಗಳು ನಡೆಸಿಕೊಟ್ಟರು.

ಶ್ರೀ ಸೋಮನಾಥ ಮರಡೂರ, ಶ್ರೀ ಚೆನ್ನು ಎಸ್.ಮಠದ, ಶ್ರೀ ಸುಧೀರ್ ಫಡ್ನೀಸ್, ಶ್ರೀಮತಿ ಜ್ಯೋತಿ ಪೊದ್ದಾರ್, ಶ್ರೀಮತಿ ಶಾಲನ್ ಮುರಗೋಡ, ಶ್ರೀ ಸಖಾರಾಮ ಉಪ್ಪೂರು, ಶ್ರೀ ಚಂದ್ರಶೇಖರ ಎನ್.ಪಿ ಅವರುಗಳು ನಿರ್ಣಯಕರುಗಳಾಗಿದ್ದರು.





## ವಿವಿಧ ಸ್ಪರ್ಧೆಗಳ ಫಲಿತಾಂಶ

**ಕಬಡ್ಡಿ :** 1. ಬೆಳ್ಳಿಯಪ್ಪಾಸ್ ಗ್ರೂಪ್ 2. ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ

**ವಾಲಿಬಾಲ್ :** 1. ಸೌತ್ ಕೆನರಾ 2. ಹೊಯ್ಸಳ ಗುರ್‌ಗಾಂವ್

**ಥ್ರೋಬಾಲ್ :** (ಮಹಿಳೆಯರು) 1. ಸೌತ್ ಕೆನರಾ–ಬಿ 2. ಸೌತ್ ಕೆನರಾ–ಎ

**ಲಗೋರಿ :** 1. ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ 2. ಡಿವಿಜಿಎಸ್

**ಟೇಬಲ್ ಟೆನ್ನಿಸ್ :** (ಪುರುಷರು) 1. ಪಿ. ದಿನೇಶ್ 2. ಗಣೇಶ್ ಬಿ.

**ಶಟಲ್ ಬ್ಯಾಡ್ಮಿಂಟನ್ ಸಿಂಗಲ್ಸ್ :** (15ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ಶಾಂತಕುಮಾರ್ ಎಸ್.ಜೆ. 2. ಪಿ. ದಿನೇಶ್

**ಶಟಲ್ ಬ್ಯಾಡ್ಮಿಂಟನ್ ಸಿಂಗಲ್ಸ್ :** (15ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ರಶ್ಮಿ ಪ್ರವೀಣ್ 2. ಅನಿತಾ ಮೂರ್ತಿ

**50 ಮೀ. ಓಟ :** (3–5 ವರ್ಷ) 1. ಸಮರ್ಥ್ ಅವಟೆ 2. ಭಕ್ತಿ 3. ಸಾಯಿ ಅನ್‌ಶ್

**50ಮೀ. ಓಟ :** (6–8 ವರ್ಷ) 1. ಲಿಖಿತಾ ನಾಯ್ಕ್ 2. ಭಾವನ ಎಸ್.ಎನ್. 3. ಭೂಮಿಕಾ ಎಸ್.ಎನ್.

**100ಮೀ. ಓಟ :** (9–12ವರ್ಷ) 1. ಆರ್.ಕೆ. ಅನನ್ಯ 2. ಅನನ್ಯ ನಾಗರಾಜ 3. ರಚನಾ ಜೆ.

**100ಮೀ. ಓಟ :** (15 ವರ್ಷ ಮೇಲ್ಪಟ್ಟವರು) 1. ಉಷಾ ಸಿ. 2. ಐಶ್ವರ್ಯ



ಮತ್ತು ದೀಪ್ತಿ ನಾಯ್ಕ್ 3. ಶ್ವೇತಾ ಜಿ

**200ಮೀ. ಓಟ :** (15 ವರ್ಷ ಮೇಲ್ಪಟ್ಟವರು) 1. ಐಶ್ವರ್ಯ 2. ಉಷಾ ಸಿ 3. ಶ್ವೇತಾ ಜಿ

**100ಮೀ. ಓಟ :** (21–35 ವರ್ಷ ಮಹಿಳೆಯರು) 1. ಜಯಮಾಲಾ ನಾಯ್ಕ್ 2. ಆರತಿ ಎಸ್.ಡಿ. 3. ಮೇಘಾ ಸಾಮ್ರಾಟ್

**100ಮೀ. ಓಟ :** (36 ವರ್ಷ ಮೇಲ್ಪಟ್ಟವರು) 1. ಜಯಲಕ್ಷ್ಮಿ 2. ಮಮತಾಶಿವರಾಮ್ 3. ಸುಜಾತಾ ಮೂರ್ತಿ

**400ಮೀ. ಓಟ :** (ಮಹಿಳೆಯರು) 1. ದೀಪ್ತಿ ನಾಯ್ಕ್ 2. ಐಶ್ವರ್ಯ ಮತ್ತು ಜಯಮಾಲಾ ನಾಯ್ಕ್

**ವೇಗ ನಡಿಗೆ :** (41–49 ವರ್ಷ, ಮಹಿಳೆಯರು) 1. ಲೀಲಾ 2. ಮಮತಾ ಶಿವರಾಮ್ 3. ಸವಿತಾ

**ಶಾಟ್‌ಪುಟ್ :** (35 ವರ್ಷ, ಮಹಿಳೆಯರು) 1. ದಿವ್ಯ 2. ಉಷಾ ಸಿ 3. ಮಂಜುಳಾ ರೈ

**ಶಾಟ್‌ಪುಟ್ :** (36 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಜಯಲಕ್ಷ್ಮಿ 2. ಮಮತಾ ಶಿವರಾಮ್ 3. ವನಿತಾ

**ರಿಲೆ :** (ಮಹಿಳೆಯರು) 1. ಕೆ.ಕೆ. ಫ್ರೆಂಡ್ಸ್–ತಂಡ 2. ಜಯಲಕ್ಷ್ಮೀ–ತಂಡ 3. ಆರತಿ ಸಂಜೀವ್–ತಂಡ

**50 ಮೀ. ಓಟ :** (6–8 ವರ್ಷ) 1. ರೋಹನ್ ರಂಗನಾಥ್ 2. ಅಭಿಷೇಕ್ 3. ಸೃಜನ್

**100 ಮೀ. ಓಟ :** (9–12 ವರ್ಷ) 1. ಜಿತೇಶ್ ಕುಮಾರ್ 2. ಶ್ರೀಧನ್ ಮೂರ್ತಿ 3. ಎ. ಸ್ವರೂಪ್

**100 ಮೀ. ಓಟ :** (15 ವರ್ಷ ಮೇಲ್ಪಟ್ಟ ಪುರುಷರು) 1. ನಾಗರಾಜ ಎಚ್. 2. ಸನ್ಮಾನ್ ಗೌಡ 3. ರತ್ನಾಕರ

**ಮೂರು ಕಾಲಿನ ಓಟ :** (15 ವರ್ಷ) 1. ಕುಶಾಲ್ ಮತ್ತು ಗೌತಮ್ 2. ರಜತ್ ಮತ್ತು ಪುನೀತ್ 3. ಪ್ರವೀಣ್ ಮತ್ತು ಜಿತೇಶ್

**ಮೂರು ಕಾಲಿನ ಓಟ :** (15ವರ್ಷ) 1. ಯಶಸ್ವಿನಿ ಗೌಡ ಮತ್ತು ಲಿಖಿತಾ 2. ಅನನ್ಯಾ ಮತ್ತು ರಚನಾ ಜೆ. 3. ಭೂಮಿಕಾ ಶಿವರಾಮ್ ಮತ್ತು ಅನನ್ಯಾ ನಾಗರಾಜ್

**ಶಾಟ್ ಪುಟ್ :** (36–49ವರ್ಷ ಪುರುಷರು) 1.ವೈ.ಎಂ. ಹೆಗ್ಡೆ 2. ಡಾ. ಸಚಿತ್ ಶೆಟ್ಟಿ 3. ಕೃಷ್ಣರಾಜ್ ಕೆ.ಎನ್.

**ಶಾಟ್‌ಪುಟ್ :** (50ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ರಮೇಶ್ ಕೆ.ವಿ. 2. ಬಿ. ಚಂದ್ರಪ್ಪ

**ಶಾಟ್‌ಪುಟ್ :** (35ವರ್ಷ ಪುರುಷರು) 1. ದಿಶಾಂತ್ ಶೆಟ್ಟಿ 2. ಪ್ರದೀಪ್ ಕುಮಾರ್ 3. ರಾಘು

**100 ಮೀ. ಓಟ :** (41 ವರ್ಷ ಮೇಲ್ಪಟ್ಟ ಪುರುಷರು) 1. ವೈ.ಎಂ. ಹೆಗ್ಡೆ 2. ಲೋಕೇಶ್ ಕೆ. 3. ಎಸ್.ಡಿ. ಶ್ರೀನಿವಾಸ

**400 ಮೀ. ಓಟ :** (45–49ವರ್ಷ ಪುರುಷರು) 1. ವೈ.ಎಂ. ಹೆಗ್ಡೆ 2. ಮಲ್ಲಪ್ಪ







3. ಕೆ.ಎಸ್. ಪಾಪೇಗೌಡ

**ವೇಗ ನಡಿಗೆ :** (50 ವರ್ಷ ಮೇಲ್ಪಟ್ಟ ಪುರುಷರು) 1. ರಮೇಶ್ ಕೆ.ವಿ. 2. ಎಚ್.ಜಿ. ಶಿವರಾಮ್ 3. ದೇವೇಂದ್ರಪ್ಪ

**200 ಮೀ. ಓಟ :** (ಪುರುಷರು) 1. ಎಚ್. ನಾಗರಾಜ 2. ಸನ್ಮಾನ್ ಗೌಡ 3. ಮನೀಶ್ ಪೂಜಾರಿ

**400 ಮೀ. ಓಟ :** (ಪುರುಷರು) 1. ಎಚ್. ನಾಗರಾಜ 2. ಸನ್ಮಾನ್ ಗೌಡ 3. ಮನೀಶ್ ಪೂಜಾರಿ

**ಮೂರು ಕಾಲಿನ ಓಟ :** (ಪುರುಷರು) 1.ವಿಶ್ವನಾಥ ಮತ್ತು ಧರ್ಮಪ್ರಕಾಶ್ 2. ಅಶೋಕ ಮತ್ತು ರತ್ನಾಕರ 3. ನಾಗರಾಜ ಮತ್ತು ಮಲ್ಲಪ್ಪ

**ಮೂರು ಕಾಲಿನ ಓಟ :** (ಮಹಿಳೆಯರು) 1. ಮಮತಾ ಶಿವರಾಮ್ ಮತ್ತು ಉಷಾ 2. ಆರತಿ ಮತ್ತು ಸೂಶ್ಮಾ 3. ಜಯಶ್ರೀ ಮತ್ತು ವಿಮಲಾ ರಂಗನಾಥ್

**ರಿಲೇ :** (ಪುರುಷರು) 1. ಕೆ.ಕೆ. ಫ್ರೆಂಡ್ಸ್ ತಂಡ 2. ಮಹಾವೀರ್ ತಂಡ 3. ನಾಗರಾಜ ತಂಡ

**ಸೂಜಿ ದಾರ :** (40 ವರ್ಷ) 1. ಮಹಾವೀರ್ ಮತ್ತು ಸೂಶ್ಮಾ 2. ಮಹದೇವ್ ಮತ್ತು ಸವಿತಾ 3. ಎಸ್.ಡಿ. ಶ್ರೀನಿವಾಸ ಮತ್ತು ಜಯಲಕ್ಷ್ಮಿ

**ಲಿಂಬೆ ಮತ್ತು ಚಮಚ :** (30ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಸುಜಾತ ಮೂರ್ತಿ 2. ಜ್ಯೋತಿ ಜಗದೀಶ 3. ಕೆ. ಜ್ಯೋತಿ

**ಕೇರಂ ಸಿಂಗಲ್ಸ್ :** (15 ವರ್ಷ ಮೇಲ್ಪಟ್ಟ ಪುರುಷರು) 1. ತ್ಯಾಗೇಶ್ ಮೂರ್ತಿ 2. ಎಚ್. ನಾಗರಾಜ

**ಕೇರಂ ಸಿಂಗಲ್ಸ್ :** (15 ವರ್ಷ ಮೇಲ್ಪಟ್ಟ ಮಹಿಳೆಯರು) 1.ಬಿ. ವಿಜಯಶ್ರೀ 2. ವಿಮಲಾ ರಂಗನಾಥ್

**ಕೇರಂ ಡಬಲ್ಸ್ :** (15 ವರ್ಷ ಮಿಕ್ಸ್) 1. ಸತೀಶ್ ಎಂ.ಆರ್. ಮತ್ತು ಡಾ. ಸಾಯಿಪ್ರಶಾಂತಿ ಶೆಟ್ಟಿ 2. ಪುನೀತ್ ಚಂದ್ರಪ್ಪ ಮತ್ತು ವೀಣಾ ಜಗದೀಶ

**ಚೆಸ್ :** (10 ವರ್ಷ ಮೇಲ್ಪಟ್ಟವರು) 1. ಪ್ರದೀಪ್ ಕುಮಾರ್ 2. ಶಾಂತಕುಮಾರ್ ಎಸ್.ಜೆ.

**ರಂಗೋಲಿ :** (15 ವರ್ಷ ಮೇಲ್ಪಟ್ಟವರು) 1. ಮೈಥಿಲಿ ಅತ್ತಾವರ 2. ಪ್ರೇಮಾ ಗೌಡ 3. ಆರತಿ

**ಸ್ಮರಣಶಕ್ತಿ ಪರೀಕ್ಷೆ :** (7–10 ವರ್ಷ) 1. ಋತ್ವಿಕ್ ನೆಲ್ಲಿ 2. ಪವನೀ ಪ್ರಸಾದ್ 3. ಲಿಖಿತಾ ನಾಯ್ಕ್

**ಸ್ಮರಣಶಕ್ತಿ ಪರೀಕ್ಷೆ :** (10–14 ವರ್ಷ) 1. ಪೃಥ್ವಿ 2. ಯಶಸ್ವಿನಿ ಗೌಡ 3. ರಾಘವೇಂದ್ರ

**ಚಿತ್ರ ಬರೆಯುವ ಸ್ಪರ್ಧೆ :** (3–5 ವರ್ಷ) 1. ಭಕ್ತಿ 2. ಸಮರ್ಥ್ ಅವಾಟೆ 3. ಧನ್ವಿನ್ ಎಚ್

ಚಿತ್ರ ಬರೆಯುವ ಸ್ಪರ್ಧೆ : (6–9 ವರ್ಷ) 1. ಚೈತನ್ಯ ಡಿ. 2. ಪವನಿ ಪ್ರಸಾದ್ 3. ಜೆ. ರಿಷಿ ಮತ್ತು ಭುವನ್

**ಫ್ಯಾನ್ಸಿ ಡ್ರೆಸ್ :** (3–5 ವರ್ಷ) 1. ಶೃಜನ್ ಆರ್. 2. ಭಕ್ತಿ 3. ಸಮರ್ಥ್ ಅವಟೆ

**ಫ್ಯಾನ್ಸಿ ಡ್ರೆಸ್ :** (6–9 ವರ್ಷ) 1. ಋತ್ವಿಕ್ ನೆಲ್ಲಿ 2. ಜೆ. ರಿಷಿ 3. ಸ್ರೀಚಂದ್

**ಕನ್ನಡ ರೈಮ್ಸ್ :** (3–5 ವರ್ಷ) 1. ಸಮರ್ಥ್ ಅವಾಟೆ, ಭಕ್ತಿ 2. ಧನ್ವಿನ್ ಎಚ್, ಅವನಿ ನೆಲ್ಲಿ 3. ಶೃಜನ್ ಆರ್, ಜೀವನ್ ಎಲ್, ಓಶಿನ್ ಮುರಗೋಡ, ಸಮಾಧಾನಕರ ಬಹುಮಾನ : ಅಭಿಜ್ಞಾ

**ಕ್ವಿಜ್ :** (15 ವರ್ಷ ಮೇಲ್ಪಟ್ಟವರು) 1. **ರಾಷ್ಟ್ರಕೂಟ ತಂಡ** – ನಂದಿನಿ ಕೆ.ಆರ್, ಎಚ್.ಎ. ಚೈತ್ರ, ಎಚ್.ಜಿ. ಶಿವರಾಮ್, ಅಲೋಕ್ ರೈ, ಪೃಥ್ವಿ ಕಾರಿಂಜೆ, ವಿಮಲಾ ರಂಗನಾಥ್, ಶ್ವೇತಾ ಪಿ.ಸಿ., ರಮೇಶ್. 2. **ಮೌರ್ಯ ತಂಡ** : ಬಿ. ವಿಜಯಶ್ರೀ, ಎ.ಟಿ. ಶ್ರೀನಿವಾಸ, ಕವಿತಾ ದಿನೇಶ್, ಶಕುಂತಲಾ ನಾಯಕ್, ನಾಗರಾಜ, ವೀಣಾ ಜಗದೀಶ್, ಎ.ವಿ. ಚಿತ್ತರಂಜನ್ ದಾಸ್, ಚಂದ್ರಶೇಖರ ಎನ್.ಪಿ. 3. **ಹೊಯ್ಸಳ ತಂಡ** : ಲೀಲಾ ದೇವರಾಜ್, ತ್ಯಾಗೇಶ್ ಮೂರ್ತಿ, ಅನಿತಾ ಮೂರ್ತಿ, ಗಾಯತ್ರಿ, ಪ್ರೇಮಾ ಗೌಡ, ಶೋಭಾ ನಾಗರಾಜ, ಜ್ಯೋತಿ, ದಿಶಾಂತ್ ಶೆಟ್ಟಿ.

**ಪಿಕ್ ಅಂಡ್ ಸ್ಪೀಕ್ :** (18 ವರ್ಷ ಮೇಲ್ಪಟ್ಟವರು) 1. ಪೃಥ್ವಿ ಕಾರಿಂಜೆ 2. ಎ.ವಿ. ಚಿತ್ತರಂಜನ್ ದಾಸ್ 3. ನಂದಿನಿ ಕೆ.ಆರ್.

**ಕನ್ನಡ ಸ್ಪೀಚ್ :** (18 ವರ್ಷ ಮೇಲ್ಪಟ್ಟವರು) 1. ನಂದಿನಿ ಕೆ.ಆರ್. 2. ಪೃಥ್ವಿ ಕಾರಿಂಜೆ 3. ಎ.ವಿ. ಚಿತ್ತರಂಜನ್ ದಾಸ್

**ಭಕ್ತಿ ಗೀತೆ :** (10–17 ವರ್ಷ) 1. ರಚನಾ ಜೆ. 2. ಓಶೋ ಮುರಗೋಡ 3. ಚೈತನ್ಯ ಡಿ

**ಭಾವಗೀತೆ :** (10–17 ವರ್ಷ) 1. ರಚನಾ ಜೆ. 2. ಅನನ್ಯ

**ಭಕ್ತಿಗೀತೆ :** (18 ವರ್ಷ ಮೇಲ್ಪಟ್ಟವರು) 1. ಪೃಥ್ವಿ ಕಾರಿಂಜೆ, ಮಮತಾ ಶಿವರಾಮ್ 2. ಎ.ವಿ. ಚಿತ್ತರಂಜನ್ ದಾಸ್, ಶೋಭಾ 3. ಶಿಲ್ಪ ಇ

**ಭಾವಗೀತೆ :** (18 ವರ್ಷ ಮೇಲ್ಪಟ್ಟವರು) 1. ಶೋಭಾ 2. ಮಮತಾ ಶಿವರಾಮ್, ಎ.ಟಿ. ಶ್ರೀನಿವಾಸ 3. ಶಿಲ್ಪ ಇ., ಪೃಥ್ವಿ ಕಾರಿಂಜೆ.










# ಅರವಿಂದ ಕೌಜಲಗಿ ನಿಧನ ಕಳಚಿ ಹೋದ 'ಕನ್ನಡ ಭಾರತಿ'ಯ ಮತ್ತೊಂದು ಕೊಂಡಿ

ದೆಹಲಿ ಕರ್ನಾಟಕ ಸಂಘದ ಈಗಿನ ಕಾರ್ಯಕಾರಿ ಸಮಿತಿಯ ವಿಶೇಷ ಆಹ್ವಾನಿತ ಹಾಗೂ ದೆಹಲಿಯ ಕನ್ನಡಭಾರತಿ ಸೇರಿದಂತೆ ಕನ್ನಡ ರಂಗಭೂಮಿಯ ಹಿರಿಯ ಚೇತನವಾಗಿದ್ದ ಶ್ರೀ ಅರವಿಂದ ಕೌಜಲಗಿ ಅವರು ಇದೇ ಸೆಪ್ಟಂಬರ್ 9ರಂದು ದೆಹಲಿಯಲ್ಲಿ ನಿಧನರಾದರು. ಅವರು ತಮ್ಮ ಪತ್ನಿ ಶ್ರೀಮತಿ ರಾಧಾ ಕೌಜಲಗಿ ಮಕ್ಕಳು–ಅಲ್ಲದೇ ಅಪಾರ ಸ್ನೇಹಿತವರ್ಗವನ್ನು ಅಗಲಿದ್ದಾರೆ.

ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಸೆಪ್ಟಂಬರ್ 14ರಂದು ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಅಗಲಿದ ಅರವಿಂದ ಕೌಜಲಗಿ ಅವರಿಗೆ ಅಂತಿಮ ಗೌರವವನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಾತಾಡಿದ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ದೆಹಲಿ ಕರ್ನಾಟಕ ಸಂಘದ ಬೆಳವಣಿಗೆಯಲ್ಲಿ ಶ್ರೀ ಕೌಜಲಗಿ ಅವರ ಅಪೂರ್ವ ಕೊಡುಗೆಯನ್ನು ಸ್ಮರಿಸಿದರು. "ಅವರು ದೆಹಲಿಯಲ್ಲಿ ಕನ್ನಡ ರಂಗಭೂಮಿಯನ್ನು ಗಟ್ಟಿಯಾಗಿ ಕಟ್ಟುವುದಕ್ಕೆ ಪ್ರಯತ್ನ ಮಾಡಿದವರು. ಬಿ.ವಿ. ಕಾರಂತರ ಜತೆ ಸೇರಿ ದೆಹಲಿಯಲ್ಲಿ ಕನ್ನಡ ಭಾರತಿಯಲ್ಲಿ ತನ್ನನ್ನು ತೊಡಗಿಸಿಕೊಂಡರು" ಎಂದು ಹೇಳಿದರು. ಹಿಂದೆ ಕನ್ನಡಭಾರತಿಯಲ್ಲಿ ನಡೆದಂತಹ ರಂಗಚಟುವಟಿಕೆಗಳನ್ನು ದೆಹಲಿಯಲ್ಲಿ ಮತ್ತೆ ನಡೆಸಬೇಕೆಂಬ ಯೋಜನೆಗೆ ಅವರ ಸಹಕಾರವನ್ನು ಕೋರಿದಾಗ ಅವರು ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಿದ್ದರು ಎಂದು ಶ್ರೀ ಬೆಳ್ಳಾರೆ ಅವರು ತಿಳಿಸಿದರು. ಶ್ರೀ ಕೌಜಲಗಿ ಅವರ ಆಕಸ್ಮಿಕ ನಿಧನದಿಂದ ದೆಹಲಿಯ ಕನ್ನಡ ರಂಗ ಚಟುವಟಿಕೆಗೆ ತುಂಬಲಾರದ ನಷ್ಟವಾಗಿದೆ ಎಂದು ಅವರು ನುಡಿದರು. ಸಂಘದ ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಅವರೂ ಮಾತಾಡಿ ಶ್ರದ್ಧಾಂಜಲಿ ಅರ್ಪಿಸಿದರು.

ಶ್ರೀ ಕೌಜಲಗಿ ಅವರ ಒಡನಾಡಿ ಮತ್ತು ದೆಹಲಿಯ ಹಿರಿಯ ರಂಗಕರ್ಮಿ ಶ್ರೀ ಎಚ್.ಎಸ್. ಕುಲಕರ್ಣಿ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ ಶ್ರೀ ಕೌಜಲಗಿ ಅವರ ಜತೆ ಪ್ರೀತಿ ಮತ್ತು ವಿಶ್ವಾಸದಿಂದ ನಾಲ್ಕು ದಶಕಗಳ ಕಾಲ ಬಹಳ ಉತ್ಸಾಹದಿಂದ ಕೆಲಸ ಮಾಡಿದೆವು. ಅವರ ಮೋಟೇರಾಮನ ಪಾತ್ರವು ಬಹಳಷ್ಟು ಸ್ಮರಣೀಯವಾದುದು ಎಂದು ನುಡಿದರು. ಅವರು ಜನಕಪುರಿ ಕನ್ನಡ ಕೂಟದ ನಾಟಕಗಳಲ್ಲೂ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು ಎಂದು ಶ್ರೀ ಕುಲಕರ್ಣಿ ಅವರು ಸ್ಮರಿಸಿದರು.

ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ ಅವರು ಮಾತಾಡುತ್ತಾ ರಂಗದ ಮೇಲೆ ನಿಲ್ಲುವ ಆತ್ಮಸ್ಥೈರ್ಯವನ್ನು ಶ್ರೀ ಕೌಜಲಗಿಯವರು ನೀಡಿದರು ಎಂದರು. ಆದರೆ ಇತ್ತೀಚೆಗೆ ತನ್ನ ನಿರ್ದೇಶನದಲ್ಲಿ ಪ್ರದರ್ಶನಗೊಂಡ ಮುದ್ದಣ್ಣನ ಪ್ರಮೋಷನ್ ಪ್ರಸಂಗ ನಾಟಕಕ್ಕೆ ಬರುತ್ತೇನೆ ಎಂದವರು ಬರಲೇ ಇಲ್ಲ. ಬರುತ್ತಾರೆ ಅಂತ ಕಾಯುತ್ತ ಇದ್ದೆವು, ಅವರು ಬರಲಿಲ್ಲ, ಎಂದು ಗದ್ಗದಿತರಾದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ವಿ.ವಿ. ಬಿರಾದಾರ ಅವರು ಮಾತಾಡಿ ಶ್ರೀ ಅರವಿಂದ ಕೌಜಲಗಿ ಅವರ ಜೊತೆ ಮೋಟೆರಾಮನ ಪ್ರಸಂಗ ನಾಟಕದಲ್ಲಿ ಅವರು ಭಾಗವಹಿಸಿದುದನ್ನು ಸ್ಮರಿಸಿದರು.

ಶ್ರೀ ಶಿವಾನಂದ ಇಂಗಳೇಶ್ವರ ಅವರು ಮಾತಾಡುತ್ತಾ 2001ರಲ್ಲಿ ತಾನು ದೆಹಲಿಗೆ ಬಂದಾಗ, ಅವರ ನಿರ್ದೇಶನದ ನಾಟಕ ನೋಡುವ ಅವಕಾಶ ಸಿಕ್ಕಿತು. ಅದಕ್ಕೂ ಹಿಂದೆ ಅವರ ಹೆಸರನ್ನು ಮತ್ತು ಕನ್ನಡ ಭಾರತಿಯ 'ನಾನೇ ಬಿಜ್ಜಳ' ನಾಟಕದ ಕುರಿತು ಕೇಳಿದ್ದೆ ಎಂದರು. ಆದರೆ ತನಗೆ ಅಂತಹ ಹಿರಿಯ ರಂಗ ಕಲಾವಿದರ ಜೊತೆ ಕೆಲಸ ಮಾಡುವ ಸೌಭಾಗ್ಯ ಸಿಗಲಿಲ್ಲ ಎಂದು ಮರುಗಿದರು. ನಾವೆಲ್ಲರೂ ಸೇರಿ ಮಾಡುತ್ತಿದ್ದ ನಾಟಕವನ್ನು ಪ್ರತಿ ಸಾರಿ ಬಂದು ನೋಡಿ ಬೆನ್ನು ತಟ್ಟಿ ಪ್ರಶಂಶಿಸುತ್ತಿದ್ದರು. ಅಲ್ಲದೇ ಈ ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಹೋಗಲು ಹುರಿದುಂಬಿಸುತ್ತಿದ್ದರು ಎಂದು ಶ್ರೀ ಇಂಗಳೇಶ್ವರ್ ಅವರು ಹೇಳಿದರು.

ಶ್ರೀ ಶ್ಯಾಮ ಸುಂದರ್ ಅವರು ಶ್ರೀ ಕೌಜಲಗಿಯವರನ್ನು ನೆನೆಯುತ್ತಾ ಸದಾ ನೀಟಾದ ಡ್ರೆಸ್‌ನಲ್ಲಿರುತ್ತಿದ್ದ ಅವರ ಮುಖದಲ್ಲಿ ಅಪೂರ್ವವಾದ ತೇಜಸ್ಸು ಯಾವಾಗಲೂ ಇತ್ತು ಎಂದರು. "ನಾವೆಲ್ಲರು ನಾಟಕ ಮಾಡುತ್ತಿದ್ದರೆ ಅವರು ಅಲ್ಲಿಗೆ ಬಂದು ನಮ್ಮನ್ನೆಲ್ಲಾ ಹುರಿದುಂಬಿಸುತ್ತಿದ್ದರು" ಎಂದು ಶ್ಯಾಮ ಸುಂದರ್ ಅವರು ನುಡಿದರು. ದೆಹಲಿ ಕರ್ನಾಟಕ ಸಂಘವು ಶ್ರೀ ಅರವಿಂದ ಕೌಜಲಗಿ ಅವರ ನೆನಪಿನಲ್ಲಿ ನಾಟಕವನ್ನು ನಡೆಸಬೇಕು ಎಂದು ಅವರು ನಿವೇದಿಸಿದರು.

ಡಾ. ವಿ.ಆರ್. ಗುಡ್ಡೇಗೌಡ ಅವರು ಶ್ರೀ ಕೌಜಲಗಿ ಅವರ ಅಕಸ್ಮಾತ್ ನಿಧನದ ಸುದ್ದಿ ತಿಳಿದು ತುಂಬಾ ಆಘಾತವಾಯಿತು ಎಂದರು

ಶ್ರೀ ಕೆ.ಎಸ್.ಜಿ. ಶೆಟ್ಟಿ ಅವರು ಶ್ರೀ ಕೌಜಲಗಿಯವರನ್ನು ಸ್ಮರಿಸುತ್ತಾ ಕನ್ನಡ ಭಾರತಿಯ ಕಟ್ಟುನಿಟ್ಟಿನ ಸಮಯ ಪ್ರಜ್ಞೆಯಿಂದ ಸರಿಯಾದ ಸಮಯಕ್ಕೆ ನಾಟಕವನ್ನು ಆರಂಭಿಸುತ್ತಿದ್ದರು ಎಂದರು. ಆ ಕಟ್ಟುನಿಟ್ಟಿನ ಸಮಯಪ್ರಜ್ಞೆಯನ್ನು ನಾವೆಲ್ಲರೂ ಅನುಸರಿಸಬೇಕು ಎಂದು ಅವರು ಹೇಳಿದರು.

ಶ್ರೀ ಚೆನ್ನು ಎಸ್. ಮಠದ ಅವರು ಮಾತಾಡುತ್ತಾ ಎಪ್ಪತ್ತರ ದಶಕದಲ್ಲಿ ಧಾರವಾಡದಲ್ಲಿದ್ದಾಗ ಅರವಿಂದ ಕೌಜಲಗಿ, ಎಂ.ವಿ. ನಾರಾಯಣ ರಾವ್, ಸುಭಾ ಸಿನ್ನೂರ್ ದಾಸ್ ಅವರ ಧ್ವನಿಯನ್ನು ರೇಡಿಯೋ ನಾಟಕದಲ್ಲಿ ಕೇಳಿ ಪರಿಚಯವಾಗಿತ್ತು. ಶ್ರೀ ಕೌಜಲಗಿ ಅವರ ಅಗಲಿಕೆ ಬರೇ ಕನ್ನಡ ರಂಗಭೂಮಿಗಷ್ಟೇ ಅಲ್ಲ, ಮರಾಠಿನಲ್ಲೂ ಪ್ರಬುದ್ಧವಾದ ಅಭಿನಯ ನೀಡಿದ ಅವರು ಎರಡು ರಂಗಭೂಮಿಗೂ ದೊಡ್ಡ ಕೊಡುಗೆ ನೀಡಿದ್ದಾರೆ ಎಂದರು. ಶ್ರೀ ಉಪ್ಪೂರು ಸಖಾರಾಮ ಸೋಮಯಾಜಿ ಅವರು ಮಾತಾಡುತ್ತಾ ಕೌಜಲಗಿ ಅವರ ನಿಧನದಿಂದ ದೆಹಲಿಯ ಕನ್ನಡ ರಂಗಭೂಮಿಯು ದೊಡ್ಡಣ್ಣನೊಬ್ಬನನ್ನು ಕಳಕೊಂಡಿತು ಎಂದರು. ಶ್ರೀ ಸಂತೋಷ್ ಕುಮಾರ್ ಉಪಾಧ್ಯಾಯ ಅವರು ಮಾತಾಡಿ ಶ್ರೀ ಅರವಿಂದ ಕೌಜಲಗಿ ಅವರ ಭೇಟಿಯಾದಂದಿನಿಂದ ಅವರ ಬಗ್ಗೆ ಅಪಾರವಾದ ಗೌರವ ಮತ್ತು ಅವರಲ್ಲಿ ನಾಟಕ ಮತ್ತು ಸಾಹಿತ್ಯದಲ್ಲಿ ಇದ್ದ ಆಸಕ್ತಿಯ ಕುರಿತು ಹೆಮ್ಮೆಯಾಗುತ್ತಿತ್ತು ಎಂದರು. ಶ್ರೀ ಸುಧೀರ್ ಫಡ್ನೀಸ್ ಅವರೂ ಮಾತಾಡಿದರು. ಅ

***ಅಭಿಮತ ವರದಿ***

# ನಾಟಕ ಪ್ರಿಯ ಅರವಿಂದ ಕೌಜಲಗಿ ಇನ್ನಿಲ್ಲ

ಅರವಿಂದ ಕೌಜಲಗಿ ಅವರ ಹತ್ತಿರದ ಸ್ನೇಹಿತ ಹಾಗೂ ನಾಟಕದ ಒಡನಾಡಿ ಶ್ರೀ ಎಚ್.ಎಸ್. ಕುಲಕರ್ಣಿ ಅವರು ತಮ್ಮ ಗೆಳೆಯನಿಗೆ ಅರ್ಪಿಸಿದ ಶ್ರದ್ಧಾಂಜಲಿ

ಶ್ರೀ ಅರವಿಂದ ಕೌಜಲಗಿ ಅವರು ದೈವಾಧೀನರಾದದ್ದು ಕೇಳಿ ನನಗೆ ನಂಬಲು ಅಸಾಧ್ಯವಾಯಿತು. ಅವರ ವಯಸ್ಸು 63ವರ್ಷವಷ್ಟೆ. ಇದೇನು ಸಾವನಪ್ಪುವ ವಯಸ್ಸೇ? ಈಗ ಅವರು ಮೊಮ್ಮಕ್ಕಳನ್ನು ಎತ್ತಿ ಅವರ ಜೊತೆ ಆಟವಾಡಿ ಸಂತೋಷಪಡುತ್ತ ನಲಿದಾಡುವ ದಿನಗಳು. ಆದರೆ ಆ ಭಗವಂತನ ಆಟವೇ ಬೇರೆ. ಮನುಷ್ಯ ಒಂದು ಬಯಸಿದರೆ ಅದೃಷ್ಟ ಇನ್ನೊಂದು ಬಯಸುತ್ತದೆ. ಅವರು ಪತ್ನಿ ಶ್ರೀಮತಿ ರಾಧಾ ಕೌಜಲಗಿ, ಇಬ್ಬರು ಮಕ್ಕಳು ಲಕ್ಷ್ಣಾ ಮತ್ತು ಅಶ್ವಿನ, ಸಂಬಂಧಿಕರು, ಗೆಳೆಯರು ಮತ್ತು ಪ್ರಶಂಸಕರನ್ನು ದುಃಖದ ಮಡಿಲಲ್ಲಿ ಬಿಟ್ಟು ಅವರು ಅಗಲಿದ್ದಾರೆ. ಅದೃಷ್ಟದ ಮುಂದೆ ಮಾನವನ ಆಟ ನಡೆಯಲಾರದು. ನಮ್ಮ ಜೊತೆ ಉಳಿದಿರುವುದು ಅವರ ನೆನಪುಗಳು ಮಾತ್ರ. ಭೇಟಿ ಆಕಸ್ಮಿಕ, ಅಗಲಿಕೆ ಅನಿವಾರ್ಯ ಆದರೆ ನೆನಪು ನಿರಂತರ ...

ನನಗೆ ಅವರ ಪರಿಚಯ ಸುಮಾರು ಮೂರು ದಶಕಗಳ ಹಿಂದೆ ಆಯಿತು. ಉತ್ತರ ಕರ್ನಾಟಕದ ಕೆಲವು ಗೆಳೆಯರು ತಿಂಗಳಿಗೊಮ್ಮೆ ಒಬ್ಬೊಬ್ಬರ ಮನೆಯಲ್ಲಿ ಸೇರುವ ರೂಢಿ ಇಟ್ಟುಕೊಂಡಿದ್ದೆವು. ಆಗ ಮಾತುಕತೆ, ಹರಟೆ, ದೆಹಲಿಯಲ್ಲಿ ಅನುಭವಕ್ಕೆ ಬಂದ ತಮ್ಮ ತಮ್ಮ ಸಂಗತಿಗಳ ಬಗ್ಗೆ ಚರ್ಚೆ, ತಿಂಡಿತೀರ್ಥ, ಹೆಂಗಳೆಯರಿಂದ ದೇವರನಾಮ, ಭಾವಗೀತೆಗಳು–ಹೀಗೆ ನಮ್ಮ ಗೆಳೆತನ ಸಾಂಗವಾಗಿ ನಡೆದು ಬಂದಿತ್ತು.

ಶ್ರೀ ಅರವಿಂದ ಅವರು ನಾಟಕ ಪ್ರಿಯರು. ನನ್ನ ಜೊತೆ ಅವರು ಕೆಲವು ನಾಟಕಗಳಲ್ಲಿ ಪಾತ್ರವಹಿಸಿ ತಮ್ಮ ಉತ್ತಮ ನಟನಾ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಏಕಾಂಕ ನಾಟಕ ಸ್ಪರ್ಧೆಯಲ್ಲಿ ನಾನು ನಿರ್ದೇಶಿಸಿ ಪ್ರಸ್ತುತಪಡಿಸಿದ "ನನ್ನವಳ ಕಾಗದ" ನಾಟಕದಲ್ಲಿ ತಮ್ಮ ಉತ್ತಮ ಅಭಿನಯದಿಂದ ಜನರ ಮೆಚ್ಚುಗೆ ಪಡೆದಿರುವರು. 1986ರ ಮಾರ್ಚ್ ಒಂಭತ್ತರಂದು ದೆಹಲಿ ಕರ್ನಾಟಕ ಸಂಘದ ವಾರ್ಷಿಕ ದಿನಾಚರಣೆಯ ಸಮಯದಲ್ಲಿ ನಾನು ಬರೆದು ನಿರ್ದೇಶಿಸಿದ "ಹುಟ್ಟಿದ ಜಾತಿ ಹುಗಿದರೂ ಹೋಗದು" ನಾಟಕದಲ್ಲಿ ಶ್ರೀ ಅರವಿಂದ ಕೌಜಲಗಿ ಅವರ ಧರ್ಮಪತ್ನಿ ಶ್ರೀಮತಿ ರಾಧಾ ಕೌಜಲಗಿ ಮತ್ತು ಅವರ ಇಬ್ಬರೂ ಮಕ್ಕಳು ಲಕ್ಷ್ಣಾ ಮತ್ತು ಅಶ್ವಿನ ಉತ್ಸಾಹದಿಂದ ಭಾಗವಹಿಸಿದ ನೆನಪು ಇನ್ನೂ ನನ್ನಲ್ಲಿ ಉಳಿದಿದೆ. ನಾಟಕದ ತಾಲೀಮಿಗೆ, ಪ್ರಸಾದನ ಜೋಡಿಸುವಲ್ಲಿ ಸಹಕಾರ, ಆಗಾಗ್ಗೆ ನನಗೆ ಉತ್ತಮ ಸಲಹೆ ಚರ್ಚೆ ಮುಂತಾದವುಗಳಿಂದ ಅವರು ತೋರಿಸಿದ ಉತ್ಸಾಹ ನನ್ನ ಮನದಲ್ಲಿ ಇನ್ನೂ ಉಳಿದಿದೆ.

ದೆಹಲಿಯ ಪ್ರಖ್ಯಾತ ಕನ್ನಡ ಸಾಂಸ್ಕೃತಿಕ ಸಂಸ್ಥೆ "ಕನ್ನಡ ಭಾರತೀ" ಅವರು ಪ್ರದರ್ಶಿಸಿದ, ದಿವಂಗತ ಶ್ರೀ ಯು. ಪ್ರಭಾಕರ ರಾವ್ ಅವರು ನಿರ್ದೇಶಿಸಿದ ನಾಟಕ "ಚಾಳೀಶ" ಮತ್ತು ಶ್ರೀ ಎಂ.ಎಸ್. ಸತ್ಯು ಅವರು ನಿರ್ದೇಶಿಸಿದ "ಮೋಟೇರಾಮನ ಸತ್ಯಾಗ್ರಹ" ನಾಟಕದಲ್ಲಿ ಇವರು ನನ್ನ ಜೊತೆ ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿ ಜನರ ಪ್ರಶಂಸೆಗೆ ಪಾತ್ರರಾಗಿರುವರು.

2001ರಲ್ಲಿ ನಾನು ಮತ್ತು ನನ್ನ ಧರ್ಮಪತ್ನಿ ಚಾರ್‌ಧಾಮ್ ಯಾತ್ರೆ ಮುಗಿಸಿ ಬಂದ ನಂತರ ಮನೆಯಲ್ಲಿ ಸತ್ಯನಾರಾಯಣ ಪೂಜೆ ಮಾಡಿ ಹನ್ನೊಂದು ದಂಪತಿಗಳಿಗೆ ಫಲಪುಷ್ಪ, ಕುಂಕುಣ, ಉಡುಗೊರೆ, ಪ್ರಸಾದ ಕೊಟ್ಟು ಪೂಜಿಸಿದೆವು. ಅವರಲ್ಲಿ ಕೌಜಲಗಿ ದಂಪತಿಯೂ ಇದ್ದರು. ಹೀಗೆ ನನ್ನ ಮತ್ತು ಅವರ ಪರಿಚಯ, ಸಂಬಂಧ, ಒಡನಾಟ, ಸಾಮಿಪ್ಯ, ಪ್ರೀತಿ, ವಿಶ್ವಾಸ ಮುಂತಾದವುಗಳನ್ನು ನೆನೆಯುತ್ ಹೋದರೆ ಒಂದು ಗ್ರಂಥವೇ ಆಗಬಹುದು. ಅಂಥ ಒಬ್ಬ ಗೆಳೆಯನನ್ನು ನಾನು ಕಳಕೊಂಡಿರುವೆ.

ಸಂಕ್ಷೇಪವಾಗಿ ಅವರ ಬಗ್ಗೆ ಹೇಳಬೇಕಾದರೆ ಅವರು ಬದುಕನ್ನು ಕ್ರಿಯಾಶೀಲವಾಗಿರಿಸಿ, ದುರಾಸೆಯನು ಜೀವನದಿಂದ ತೊಳಗಿಸಿ, ಸಜ್ಜನರ ಸಂಗತಿ ಸಂಭಾಳಿಸಿ "ಸರ್ವೇ ಭವಂತು ಸುಖಿನಾಂ" ಹೇಳಿಕೆಯನು ತಮ್ಮ ನಿಜ ಜೀವನದಲ್ಲಿ ಪಾಲಿಸಿದ ಒಬ್ಬ ಮಹಾನುಭಾವ. ಅವರ ಆತ್ಮಕ್ಕೆ ಚಿರಶಾಂತಿ ದಯಪಾಲಿಸು ಎಂದು ಆ ಭಗವಂತನಲ್ಲಿ ನಮ್ಮ ಪ್ರಾರ್ಥನೆ. ಅ

***ಎಚ್.ಎಸ್. ಕುಲಕರ್ಣಿ***





# 2014ರ ಕುವೆಂಪು ರಾಷ್ಟ್ರೀಯ ಪುರಸ್ಕಾರ-
# ಹಿಂದಿ ಲೇಖಕ ಪ್ರೊ. ನಾಮವರ್ ಸಿಂಗ್ ಅವರಿಗೆ



ರಾಷ್ಟ್ರ ಕವಿ ಕುವೆಂಪು ಪ್ರತಿಷ್ಠಾನ ಪ್ರತಿವರ್ಷ ನೀಡುವ 'ಕುವೆಂಪು ರಾಷ್ಟ್ರೀಯ ಪುರಸ್ಕಾರ'ವನ್ನು ಈ ಸಲ ಹಿಂದಿಯ ಪ್ರಸಿದ್ಧ ಲೇಖಕ ಪ್ರೊ. ನಾಮವರ್ ಸಿಂಗ್ ಅವರಿಗೆ ನೀಡಿದೆ. ಪ್ರಶಸ್ತಿಯು ಐದು ಲಕ್ಷ ರೂಪಾಯಿಗಳ ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಪ್ರಶಸ್ತಿ ವಿತರಣೆ ಸಮಾರಂಭವು ಕುವೆಂಪು ಜನ್ಮ ಸ್ಥಳವಾಗ ಕುಪ್ಪಳಿಯಲ್ಲಿ, ಅವರ ಜನ್ಮ ದಿನವಾದ ದಶಂಬರ 29ರಂದು ನಡೆಯಲಿದೆ. ಕರ್ನಾಟಕದ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಅವರು ಪ್ರಶಸ್ತಿ ವಿತರಣೆ ಮಾಡಲಿದ್ದಾರೆ. ಕಳೆದ ವರ್ಷ ಈ ಪ್ರಶಸ್ತಿಯನ್ನು ಮಲೆಯಾಳಂ ಭಾಷೆಯ ಪ್ರಸಿದ್ಧ ಸಾಹಿತಿ ಶ್ರೀ ಸಚ್ಚಿದಾನಂದನ್ ಅವರಿಗೆ ನೀಡಲಾಗಿತ್ತು. ನಾಮವರ್ ಸಿಂಗ್ (ಜನನ 1927) ಅವರು ಪ್ರಸಿದ್ಧ ವಿಮರ್ಶಕರಾಗಿ, ಸಾಹಿತಿಯಾಗಿ ಮತ್ತು ಅತ್ಯುತ್ತಮ ಹಿಂದಿ ಪ್ರಾಧ್ಯಾಪಕರಾಗಿ ಉತ್ತರ ಭಾರತದಾದ್ಯಂತ ಜನಪ್ರಿಯರಾಗಿದ್ದಾರೆ. ಬಹುಶಃ ನಿರ್ಮಲ ವರ್ಮಾ ಅವರ ಅನಂತರ ಹಿಂದಿ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ ವ್ಯಕ್ತಿಯೆಂದರೆ ಪ್ರೊ. ನಾಮವರ್ ಸಿಂಗ್ ಅವರೇ. ಉತ್ತರ ಭಾರತದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಅವರಿಗೆ ಅಪಾರ ಅಭಿಮಾನಿಗಳಿದ್ದಾರೆ. ಅವರ ವಿದ್ಯಾರ್ಥಿಗಳಲ್ಲಿ ಅನೇಕರು ಇಂದು ದೇಶ-ವಿದೇಶಗಳಲ್ಲಿ ತಮ್ಮ ಬರೆವಣಿಗೆಗಳಿಂದ ಹೆಸರು ಮಾಡುತ್ತಿದ್ದಾರೆ. ಸಹೃದಯ ವ್ಯಕ್ತಿತ್ವ, ನೇರ ಮಾತುಗಳು ಮತ್ತು ವಿಭಿನ್ನ ಆಲೋಚನಾ ಕ್ರಮಗಳಿಂದಾಗಿ ಪ್ರೊ ಸಿಂಗ್ ಅವರು ಎಲ್ಲರ ಆದರಕ್ಕೆ ಪಾತ್ರರಾಗಿದ್ದಾರೆ.

ಪ್ರೊ. ನಾಮವರ್ ಸಿಂಗ್ ಅವರು ಜನಿಸಿದ್ದು ವಾರಣಾಸಿಯ ಸಮೀಪದ ಜೀವನಪುರ ಎಂಬ ಹೆಸರಿನ ಹಳ್ಳಿಯ ರೈತ ಕುಟುಂಬದಲ್ಲಿ. ಓದಿದ್ದು ಪ್ರಖ್ಯಾತವಾದ ಬನಾರಾಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ. ಅದೇ ವಿಶ್ವವಿದ್ಯಾಲಯದಿಂದ ಅವರು 1953ರಲ್ಲಿ ಹಿಂದಿ ಸಾಹಿತ್ಯದ ಮೇಲೆ ನಡೆಸಿದ ಸಂಶೋಧನೆಗಾಗಿ ಡಾಕ್ಟರೇಟ್ ಪದವಿ ಪಡೆದರು. ಮುಂದೆ ಅವರು ಬನಾರಾಸ್ ವಿಶ್ವವಿದ್ಯಾಲಯ, ಸಾಗರ ವಿಶ್ವವಿದ್ಯಾಲಯ, ಜೋಧಪುರ ವಿಶ್ವವಿದ್ಯಾಲಯಗಳಲ್ಲಿ ಹಿಂದಿ ಅಧ್ಯಾಪಕರಾಗಿ ಮತ್ತು ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು. ಅವರು ನಿವೃತ್ತಿಯಾಗುವ ಹೊತ್ತಿಗೆ ದೆಹಲಿಯ ಜವಾಹರ ನೆಹರೂ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಈ ನಡುವೆ ಅವರು ಗುಜರಾತಿನ ಮಹಾತ್ಮಾ ಗಾಂಧಿ ಅಂತಾರಾಷ್ಟ್ರೀಯ ಹಿಂದಿ ವಿಶ್ವವಿದ್ಯಾಲಯದ ಕುಲಪತಿಗಳಾಗಿಯೂ ಕೆಲಸ ಮಾಡಿ, ಬೋಧನಾ ಕ್ರಮಗಳಲ್ಲಿ ತಂದ ಪರಿಣಾಮಕಾರೀ ಬದಲಾವಣೆಗಳಿಂದ ಜನಪ್ರಿಯರಾದರು.

ಪ್ರೊ. ಸಿಂಗ್ ಅವರು ಕವಿಯಾಗಿ ಆರಂಭಿಕ ಹಂತದಲ್ಲಿ ಕಾಣಿಸಿಕೊಂಡಿದ್ದರು. ಆದರೆ ಮುಂದೆ ಅವರು ಪ್ರಗತಿಶೀಲ ಚಳುವಳಿಗಳಲ್ಲಿ ಭಾಗವಹಿಸುತ್ತಾ ಪ್ರೇಮ್‌ಚಂದರ ಬರೆಹಗಳಿಂದ ಪ್ರೇರಣೆ ಪಡೆದು ಪ್ರಖರ ವೈಚಾರಿಕರಾಗಿ ಹೊರಹೊಮ್ಮಿದರು. ಅವರ ಮೊದಲ ವೈಚಾರಿಕ ಲೇಖನಗಳ ಸಂಕಲನ ಬಕಲಮ್ ಖುದ್ 1951ರಲ್ಲಿ ಪ್ರಕಟವಾಯಿತು. ಮುಂದೆ ಅವರು ನಿಧಾನವಾಗಿ ಸಾಹಿತ್ಯ ವಿಮರ್ಶೆಯ ಕಡೆಗೆ ತಿರುಗಿಕೊಂಡರು. ಕಲಾಕೃತಿಯೊಂದು ಸರ್ವತಂತ್ರ ಸ್ವತಂತ್ರವೇನೂ ಅಲ್ಲ, ಅದು ಆಯಾ ಕಾಲದ ಆರ್ಥಿಕ, ಸಾಮಾಜಿಕ ಪರಿಸ್ಥಿತಿಗಳಿಂದ ಪ್ರೇರಣೆ ಪಡೆಯುತ್ತದೆ ಎಂಬ ಅವರ ವಾದಕ್ಕೆ ಆ ಕಾಲದಲ್ಲಿ ತುಂಬ ಬೆಂಬಲ ದೊರಕಿತ್ತು. ಹೀಗೆ ಹಿಂದಿ ಸಾಹಿತ್ಯ ವಿಮರ್ಶೆಗೆ ಸಾಮಾಜಿಕ ಆಯಾಮ ತಂದುಕೊಟ್ಟವರಲ್ಲಿ ನಾಮವರ್ ಸಿಂಗ್ ಮೊದಲಿಗರು. ತಮ್ಮ ಪ್ರಖರ ವೈಚಾರಿಕ ನೆಲೆಗಳನ್ನು ಪ್ರಚುರಪಡಿಸಲು ಅವರು ಆಲೋಚನ ಎಂಬ ಹೆಸರಿನ ತ್ರೈಮಾಸಿಕವೊಂದನ್ನು ಸಂಪಾದಿಸುತ್ತಿದ್ದರು. ಈ ಪತ್ರಿಕೆಯು ಹಿಂದಿ ಸಾಹಿತ್ಯ ವಿಮರ್ಶೆಯ ಜಾಡನ್ನೇ ಬದಲಾಯಿಸಿತು. ಆ ಸಂದರ್ಭದಲ್ಲಿ ಡಾ. ಸಿಂಗ್ ಪ್ರಕಟಿಸಿದ 'ಕವಿತಾ ಕೆ ನಯೇ ಪ್ರತಿಮಾನ್' ಹಿಂದಿ ವಿಮರ್ಶೆಗೆ ಹೊಸ ಪರಿಭಾಷೆಗಳನ್ನು ಒದಗಿಸಿಕೊಟ್ಟದ್ದಲ್ಲದೆ, ಜಡವಾಗಿದ್ದ ಹಿಂದಿ ಸಾಹಿತ್ಯ ವಿಮರ್ಶೆಗೆ ಒಂದು ಬಗೆಯ ಲವಲವಿಕೆಯನ್ನು ತಂದಿತ್ತಿತು. ಇದನ್ನು ಗಮನಿಸಿದ ಕೇಂದ್ರ ಸಾಹಿತ್ಯ ಅಕಾಡೆಮಿಯು ಈ ಕೃತಿಗೆ 1971ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿತು. ಸೃಜನಶೀಲ ಸಾಹಿತ್ಯಕ್ಕೆ ಮಾತ್ರ ನೀಡಲಾಗುತ್ತಿದ್ದ ಅಕಾಡೆಮಿ ಪ್ರಶಸ್ತಿಯು ವಿಮರ್ಶಕರ ಪಾಲಾದಾಗ ಹಲವರು ಹುಬ್ಬೇರಿದ್ದೂ ಉಂಟು ಎಂದು ಸ್ವತಹ ಪ್ರೊ. ಸಿಂಗ್ ಅವರು ಹೇಳುತ್ತಾರೆ. 1991ರಲ್ಲಿ ಸಾಹಿತ್ಯ ಅಕಾಡೆಮಿಯು ತನ್ನ ವಾರ್ಷಿಕ ನುಡಿಹಬ್ಬದ ಆಶಯ ಭಾಷಣಕ್ಕೆ ನಾಮವರ್ ಅವರನ್ನು ಕರೆಯಿತು. ಅಷ್ಟು ಹೊತ್ತಿಗೆ ಡಾ. ಸಿಂಗ್ ಅವರ ಜನಪ್ರಿಯತೆಯು ಸೃಜನಶೀಲ ಲೇಖಕರನ್ನು ಮೀರಿಸಿ ಬೆಳೆದಿತ್ತು.

ಹೀಗೆ ಪ್ರೊ. ನಾಮವರ್ ಸಿಂಗ್ ಅವರು ತಮ್ಮ ವಿಮರ್ಶೆಗಳ ಮೂಲಕ ಹಿಂದೀ ಸಾಹಿತ್ಯದ ಕ್ಷಿತಿಜಗಳನ್ನು ವಿಸ್ತರಿಸಿದ್ದಾರೆ.

ನಾಮವರ್ ಸಿಂಗ್ ಅವರ ಮುಖ್ಯ ಕೃತಿಗಳು

ದೂಸ್ರೀ ಪರಂಪರಾ ಕೀ ಖೋಜ್ (2008), ಬಕಲಮ್ ಖುದ್, ಛಾಯಾವಾದ್ (ವಿಮರ್ಶೆ 2007), ಕವಿತಾಕೆ ನಯೇ ಪ್ರತಿಮಾನ್ (ವಿಮರ್ಶೆ 2004), ಆಲೋಚಕ್ ಕೇ ಮುಖ್ ಸೇ (ವಿಮರ್ಶೆ 2005), ಇತಿಹಾಸ್ ಔರ್ ಆಲೂಚನಾ (ವಿಮರ್ಶೆ 2009), ವಾದ್ ವಿವಾದ್ ಸಂವಾದ್ (ಕಾದಂಬರಿ 2007), ಹಿಂದಿ ಕೇ ವಿಕಾಸ್ ಮೇಂ ಅಪ್‌ಭ್ರಂಶ್ ಕಾ ಯೋಗ್ (ವಿಮರ್ಶೆ 2006), ಆಧುನಿಕ್ ಸಾಹಿತ್ಯ ಕೀ ಪ್ರವೃತ್ತಿಯಾಂ (ವಿಮರ್ಶೆ 2008), ಕಾರ್ಲ್ ಮಾರ್ಕ್ಸ್: ಕಲಾ ಔರ್ ಚಿಂತನ್(ವಿಮರ್ಶೆ 2010), ಪೃಥ್ವಿರಾಜ್ ರಾಸೋ: ಭಾಷಾ ಔರ್ ಸಾಹಿತ್ಯ, ಆಲೋಚನಾ ಔರ್ ವಿಚಾರಧಾರಾ (ವಿಮರ್ಶೆ 2012), ಭಾರತೀಯ ಸಮಾಜ್(ವಿಮರ್ಶೆ 2009), ಹಿಂದಿ ಕಾ ಗದ್ಯಪರ್ವ್ (ವಿಮರ್ಶೆ 2010), ಸಾಥ್ ಸಾಥ್ (ಸಂದರ್ಶನಗಳು 2012), ಜ಼ಮಾನೆ ಸೆ ದೋ ದೋ ಹಾಥ್ (ಕಾದಂಬರಿ 2010), ಕಬಿತಾ ಕಿ ಜ಼ಮೀನ್ ಔರ್ ಜ಼ಮೀನ್ ಕೀ ಕವಿತಾ (ವಿಮರ್ಶೆ 2008), ಅ

*ಡಾ. ಪುರುಷೋತ್ತಮ ಬಿಳಿಮಲೆ*

# ತುಳು ಭಾಷೆಗೆ ಅಪಾಯವಿಲ್ಲ : ಡಾ. ಶಿವಕುಮಾರ್ ಭರಣ್ಯ



ತುಳು ಭಾಷೆಯು ಅಳಿವಿನಂಚಿನಲ್ಲಿದೆ ಎಂಬ ಯುನೆಸ್ಕೊ ವರದಿಯಿಂದ ಆತಂಕಪಡಬೇಕಿಲ್ಲ. ತುಳು ಭಾಷೆಯ ಬೆಳವಣಿಗೆಗೆ ಇಂದು ಉತ್ತಮ ಅವಕಾಶಗಳಿವೆ ಎಂದು ಆಂಧ್ರಪ್ರದೇಶದ ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯದ ತುಳು ವಿಭಾಗದ ಮುಖ್ಯಸ್ಥ ಡಾ. ಶಿವಕುಮಾರ್ ಭರಣ್ಯ ಅವರು ಅಭಿಪ್ರಾಯಪಟ್ಟರು. ಅವರು ದೆಹಲಿ ತುಳುಸಿರಿ ಮತ್ತು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ 'ತುಳು ಬೆಳವಣಿಗೆಯ ಸಾಧ್ಯತೆ' ಕುರಿತು ದೆಹಲಿಯಲ್ಲಿ ಸಪ್ಟಂಬರ್ 14ರಂದು ಉಪನ್ಯಾಸ ನೀಡಿದರು.

ಜಗತ್ತಿನಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ತುಳು ಭಾಷಿಕರಿದ್ದಾರೆ. ಅಂತರ್ಜಾಲ, ಆಧುನಿಕ ರಂಗಭೂಮಿ ಮತ್ತು ಸಿನಿಮಾದ ಮೂಲಕ ತುಳು ಭಾಷೆ ಹಿಂದಿಗಿಂತಲೂ ಹೆಚ್ಚು ಜನಪ್ರಿಯಗೊಳ್ಳುತ್ತಿದೆ ಎಂದು ವಿವರಿಸಿದರು. ದ್ರಾವಿಡ ವಿಶ್ವವಿದ್ಯಾಲಯದ ಮೂಲಕ ಶೈಕ್ಷಣಿಕವಾಗಿ ತುಳುವನ್ನು ಅಭಿವೃದ್ಧಿ ಪಡಿಸಲು ಯೋಜನೆಗಳನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ತುಳು ವಿಭಾಗಗಳನ್ನು ಆರಂಭಿಸುವಂತೆ ಆಗ್ರಹಿಸಲಾಗುವುದು ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ದೆಹಲಿ ತುಳು ಸಿರಿ ಅಧ್ಯಕ್ಷ ಡಾ. ವೈ. ಅವನೀಂದ್ರನಾಥ್ ರಾವ್ ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಅಲೋಕ್ ರೈ ಕಾರ್ಯಕ್ರಮ ನಿರ್ವಹಿಸಿದರು.

ಮಂಗಳೂರು ವಿಶ್ವವಿದ್ಯಾಲಯದ ಸರ್ವ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷೆಯಾಗಿ ಆಯ್ಕೆಯಾದ ಕುಮಾರಿ ಮೊಹೆರ್ ಶೆಟ್ಟಿ ಅವರನ್ನು ಅಭಿನಂದಿಸಿ ಗೌರವಿಸಲಾಯಿತು. ಅ

*ಅಲೋಕ್ ರೈ*



---

## ಕಾವ್ಯಾ ಕಡಮೆ ಅವರಿಗೆ ಯುವ ಪುರಸ್ಕಾರ



ಕನ್ನಡದ ಲೇಖಕಿ ಕಾವ್ಯಾ ಕಡಮೆ ಅವರ ಧ್ಯಾನಕ್ಕೆ ತಾರೀಕಿನ ಹಂಗಿಲ್ಲ ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ 2014ರ ಸಾಲಿನ ಯುವ ಪುರಸ್ಕಾರ ದೊರಕಿದೆ. ಸಾಹಿತ್ಯ ಅಕಾಡೆಮಿಯು 21 ಭಾಷೆಗಳಲ್ಲಿ ಯುವ ಪುರಸ್ಕಾರಗಳನ್ನು ಘೋಷಿಸಿದೆ. ಅವುಗಳಲ್ಲಿ 13 ಕವಿತಾ ಸಂಗ್ರಹಗಳು, ಮೂರು ಕಾದಂಬರಿಗಳು, ನಾಲ್ಕು ಕಥಾ ಸಂಗ್ರಹ ಹಾಗೂ ಒಂದು ಪ್ರಬಂಧ ಸಂಗ್ರಹವಾಗಿದೆ. ಪುರಸ್ಕಾರವು ಒಂದು ತಾಮ್ರ ಫಲಕ ಮತ್ತು ಐವತ್ತು ಸಾವಿರ ರೂಪಾಯಿಗಳ ನಗದು ಬಹುಮಾನಗಳನ್ನು ಒಳಗೊಂಡಿದೆ. ಅ

## ದೆಹಲಿ ಕನಾಟಕ ಸಂಘದ ಕಾರ್ಯಕಾರಿ ಸಮಿತಿಗೆ ಶ್ರೀಮತಿ ಪೂಜಾ ಪಿ. ರಾವ್



ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಗೆ 2013–15ರ ಅವಧಿಗೆ ಸದಸ್ಯರಾಗಿ ಚುನಾಯಿತಗೊಂಡಿದ್ದ ಶ್ರೀಮತಿ ಪೂರ್ಣಿಮಾ ಗೌಡ ಅವರ ರಾಜೀನಾಮೆಯಿಂದ ತೆರುವಗೊಂಡಿದ್ದ ಸ್ಥಾನಕ್ಕೆ ಶ್ರೀಮತಿ ಪೂಜಾ ಪಿ. ರಾವ್ ಅವರನ್ನು ಸರ್ವಾನುಮತದಿಂದ ದಿನಾಂಕ 08.10.2014ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ 2014–15ರ ಇನ್ನುಳಿದ ಕಾರ್ಯಾವಧಿಗೆ ಸದಸ್ಯರನ್ನಾಗಿ ನೇಮಕ ಮಾಡಲಾಯಿತು. ಅ




'ದೆಹಲಿ ಕರ್ನಾಟಕ ಸಂಘದ ಅಭಿಮತ' ಸಂಘದ ಸದಸ್ಯರಿಗೆ ಸಂಘದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಮತ್ತು ಬೆಳವಣಿಗೆಗಳ ಕುರಿತು ಮಾಹಿತಿ ನೀಡಲು ಪ್ರಕಟವಾಗುತ್ತಿದೆ. ಅಲ್ಲದೇ ಸ್ಥಳೀಯ ಬರಹಗಾರರಿಗೆ ತಮ್ಮ ಸಾಹಿತ್ಯಿಕ ರಚನೆಗಳನ್ನು ಪ್ರಕಟಿಸಲೂ ಒಂದು ವೇದಿಕೆಯಾಗಿದೆ. ಅಭಿಮತದ ಕುರಿತಾದ ನಿಮ್ಮ ಸಲಹೆಗಳಿಗೆ ಸ್ವಾಗತ. ನಿಮ್ಮ ಬರಹಗಳನ್ನು ದೆಹಲಿ ಕರ್ನಾಟಕ ಸಂಘಕ್ಕೆ ಇಮೇಲ್ ಮೂಲಕ ಕಳುಹಿಸಬಹುದು.

**(dksangha@gmail.com)**

ಓದುಗರ ಪತ್ರಗಳನ್ನೂ ಇದೇ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬಹುದು. ಅ

*ಸಂಪಾದಕ ಮಂಡಳಿ*

# ಮನ ಗೆದ್ದ ಮುಗ್ದಬಾಲೆ



ನಮ್ಮ ಅಭಿಮತದಲ್ಲಿ ಪ್ರತಿ ತಿಂಗಳೂ ಪ್ರಕಟವಾಗುತ್ತಿದ್ದ ಭಾವನೆಯ ಬಳ್ಳಿಯ ಅಂಕಣದಲ್ಲಿ ಹೊಸ ಎಲೆಗಳು ಚಿಗುರುತ್ತಾ ಇದ್ವು. ಆದ್ರೆ ಒಂದೆರಡು ತಿಂಗಳಿನಿಂದ ಒಂದೂ ಹೊಸ ಎಲೆ ಕಾಣಿಸ್ತಾ ಇಲ್ಲಾ, ಯಾಕೆ ? ಅಂತ ಮೊನ್ನೆ ಯಾರೋ ಒಬ್ರು ಕೇಳಿದ್ರು. ಅವತ್ತಿಂದ 'ಯಾಕಿರಬಹುದು' ಯಾಕೆ ನಮ್ಮ ಬಳ್ಳಿ ಬೆಳೀತಾ ಇಲ್ಲಾ? ಬಹುಷಃ ಇದಕ್ಕೆ ಹೊಸ ಮಣ್ಣು ಬೇಕಾಗಿರಬಹುದು, ಇಲ್ಲಾ ಈ ಬಿಸಿಲಿನಿಂದ ನೀರು ಕಮ್ಮಿ ಸಿಗ್ತಿರಬಹುದು? ಎಂದೆಲ್ಲಾ ಯೋಚಿಸ್ತಾ ಇದ್ದೆ. ಅದೇ ಗುಂಗಿನಲ್ಲಿ ಇವತ್ತು ರಾಜೇಂದ್ರ ನಗರದಲ್ಲಿರುವ ಸೂಪರ್ ಸ್ಟುಡಿಯೋದ ಮುಂದೆ ಕಿರಿದಾದ ಜಾಗದಲ್ಲಿ ಕಸರತ್ತು ಮಾಡ್ತಾ, ದೊಡ್ಡ ಮರದ ಬದಿಯಲ್ಲಿ ಕಾರನ್ನ ಪಾರ್ಕ ಮಾಡ್ತಾ ಇದ್ದೆ. ಆಗ 'ಹಾಂ..ಹಾಂ.. ಠೀಕ್ ಹೈ ಆಂಟೀ ..ಠೀಕ್ ಹೈ ..ಬಸ್ ಬಸ್' ಎಂಬ ಪುಟ್ಟ ಸ್ವರ ಕೇಳಿಸಿತು. ಕನ್ನಡಿಯಲ್ಲಿ ಬಗ್ಗಿ ನೋಡಿದೆ. ನೆತ್ತಿಯ ಮೇಲೊಂದು ನಾರದನ ಹಾಗೆ ಪುಟ್ಟ ಜುಟ್ಟು, ಗುಲಾಬಿ ಬಣ್ಣದ ಪ್ಯಾಂಟನ್ನು ತೊಟ್ಟ ಬಟ್ಟಲು ಕಂಗಳ ಪುಟ್ಟ ಹುಡುಗಿ ನಗುತ್ತಾ ಕೈ ಮಾಡ್ತಾ ಇದ್ಲು. ಆಗ ನನಗೆ ನೆನಪಾದದ್ದು ಮೊದ್ಲು ಟಿವಿಯಲ್ಲಿ ಬರ್ತಾ ಇದ್ದ ಒಂದು ಜಾಹೀರಾತು. 'ಲಗೀ ಕ್ಯಾ' ಅಂತ ಕಾರಿನಾತ ಕೇಳೋವಾಗ 'ನಹೀ, ನಹೀ... ಹಾಂ, ಹಾಂ ಅಬ್ ಲಗೀ' ಅನ್ನುವ ಆ ತುಂಟ ಪೋರನ ಜಾಹೀರಾತು. ಅದು ನನಗೆ ತುಂಬಾ ಹಿಡಿಸಿತ್ತು. ಈ ಹುಡುಗಿಯೂ ಅದೇ ರೀತಿ ಆಟವಾಡ್ತಾಳೇನೋ ಅಂತ ಮತ್ತೊಮ್ಮೆ ಬಗ್ಗಿ ನೋಡಿದೆ. ಸದ್ಯ ಹಾಗೇನೂ ಆಗಿರಲಿಲ್ಲ, ಮತ್ತೆ ನನ್ನ ಕಾರು ಹಿಂದೆ ಇದ್ದ ಮರವನ್ನ ಹೋಗಿ ಅಪ್ಪಿಕೊಂಡಿರಲಿಲ್ಲ.. ಹೂಂ..ಪರವಾಗಿಲ್ವೇ, ಒಳ್ಳೇ ಹುಡುಗಿ ಅನ್ನುತ್ತಾ ಅವಳನ್ನು ನೋಡಿ ಕಿರುನಗೆ ಬೀರಿದಾಗ ಎಲ್ಲೋ ನೋಡಿದ್ದೀನಲ್ಲಾ ಅಂತ ಅನಿಸ್ತು. ಆದ್ರೆ ನೆನಪಾಗ್ಲಿಲ್ಲ. ನನ್ನ ಉತ್ತರಕ್ಕೆ ಪ್ರತ್ಯುತ್ತರವಾಗಿ ಮುಂದೆ ಬಂದು ನಗುನಗುತ್ತಾ, 'ಆಂಟಿ.. ಕೈಸೀ ಹೋ' ಆಜ್ ಧೂಪ್ ಬಹುತ್ ಹೈ ನಾ'. ಅಂದ್ಲು.. ಇವಳೇನಪ್ಪಾ, ತುಂಬಾ ಪರಿಚಯ ಇದ್ದವ್ರ ಹಾಗೆ ಮಾತಾಡ್ತಾ ಇದ್ದಾಳಲ್ಲ ಅನ್ನುತ್ತಾ 'ಠೀಕ್ ಹೂಂ ಬೆಟಾ.. ಹಾಂ ಆಜ್ ಬಹುತ್ ಹೈ' ಅನ್ನುತ್ತಾ ಎಲ್ಲಿ ನೋಡಿದ್ದೀನಿ ಅಂತ ನೆನಪು ಮಾಡಿಕೊಳ್ತಾ ಕೆಳಗಿಳಿದೆ. ಇಷ್ಟು ಪ್ರೀತಿಯಿಂದ ಮಾತನಾಡುವಾಗ ಹಾಗೇ ಸುಮ್ನೆ ಹ್ಯಾಗೆ ಹೋಗೋದೂಂತ? ನಿನ್ನ ಹೆಸರೇನು ಅಂದೆ. ಅದಕ್ಕೆ 'ಆರತಿ' ಅಂತ ಉತ್ತರಿಸಿದಳು. 'ನಿನ್ನ ಹೆಸರು ಚೆನ್ನಾಗಿದೆ' ಎನ್ನುತ್ತಾ ಪರ್ಸ್ ತೆಗೆದುಕೊಂಡು ಮುಂದೆ ನಡೆದೆ. ಆದ್ರೆ ಅವಳು ನನ್ನನ್ನ ಹಿಂಬಾಲಿಸುತ್ತಾ 'ಆಂಟಿ,. ಆವತ್ತು ನೀವು ಕೊಟ್ಟ ಚಾಕಲೇಟ್ ಮತ್ತೆ ಕೇಕು ತುಂಬಾ ಚೆನ್ನಾಗಿತ್ತು, ನಾನು ನನ್ನ ತಂಗಿಗೂ ಕೊಟ್ಟೆ, ಅಮ್ಮಂಗೂ ಕೊಟ್ಟೆ' ಎಂದು ಭಾರೀ ಖುಷಿಯಿಂದ ಹೇಳಿದಳು. ಆಗ ನನಗೆ ನೆನಪಾದದ್ದು ಹೋದ ತಿಂಗಳು ನಡೆದ ಘಟನೆ.

ಹೆಣ್ಣಿನ ಬಾಳು ಮದ್ವೆ ಆದ ಮೇಲೆ, ಅಮ್ಮನ ಪಟ್ಟ ಸಿಕ್ಕ ಮೇಲೆ ಎಲ್ಲವೂ ಬದಲಾಗಿ ಹೋಗುತ್ತೆ ಅಲ್ವಾ? ಆಕೆ ಮನೇಲಿ ಇದ್ರೂ ಅಷ್ಟೇ, ಮನೆಯಿಂದ ಹೊರಗೆ ಕೆಲಸಕ್ಕೆ ಹೋದ್ರೂ ಅಷ್ಟೇ.. ಮಕ್ಕಳ, ಪತಿಯ ಹೊಟ್ಟೆಯ ಚಿಂತೆ, ಮನೆ ಚಿಂತೆ ತಪ್ಪೋದಿಲ್ಲ ನೋಡಿ. ಅವತ್ತೂ ಹಾಗೇ ಆಯ್ತು. ನಾನು ಇನ್ನೊಂದು ಕಡೆ ರೆಕಾರ್ಡಿಂಗ್ ಮುಗಿಸಿಕೊಂಡು ಮನೆಗೆ ಹೋಗೋವಾಗ ತಡವಾಗುತ್ತೇಂತ ಮಕ್ಕಳಿಗೋಸ್ಕರ ಪೇಸ್ಟ್ರೀ, ಚಿಪ್ಸ್ ಹಾಗೊ ಅವರ ಮೆಚ್ಚಿನ ಚಾಕೋಲೇಟ್ ತೆಗೆದು ಕೊಂಡು ಬಂದಿದ್ದೆ. ಸೂಪರ್ ಸ್ಟುಡಿಯೋದಲ್ಲೂ ಸ್ವಲ್ಪ ಕೆಲಸ ಇತ್ತು. ಕಾರನ್ನು ನಿಲ್ಲಿಸುತ್ತಿದ್ದಾಗ ಮಕ್ಕಳ ಅಳುವಿನ ಸ್ವರ ಕೇಳಿಸಿತು. ಅಲ್ಲೇ ಪಾರ್ಕಿಂಗ್ ಹತ್ರ ಮನೆಕಟ್ಟೋ ಕೂಲಿಗಾರರ ಕುಟುಂಬದವ್ರ ಚಿಕ್ಕ ಚಿಕ್ಕ ಗುಡಿಸಿಲುಗಳಿವೆ. ಒಂದು ಪುಟ್ಟ ಹುಡುಗಿ ಮೂಲೆಯಲ್ಲಿ ತನ್ನ ತಂಗಿಯನ್ನು ಆಡಿಸುತ್ತಾ, ಹಾಡು ಹೇಳುತ್ತಾ ಮಲಗಿಸುತ್ತಿದ್ದಳು. ಸುಮಾರು ನಾಲ್ಕು ವರ್ಷದವಳಿರ ಬೇಕು. ತಂಗಿಯನ್ನು ಪುಟ್ಟ ಕೈಗಳಿಂದ ಅಪ್ಪಿ ಹಿಡಿದ ಆ ದೃಶ್ಯ ನೋಡಿ 'ಅಯ್ಯೋ ಪಾಪ' ಅನಿಸಿತು. ಅಪ್ಪ-ಅಮ್ಮ ಕೂಲಿ ಕೆಲಸಕ್ಕೆ ಹೋದ್ರೆ ದೊಡ್ಡಕ್ಕ ಚಿಕ್ಕವ್ರನ್ನ ನೋಡಿಕೊಳ್ಳಬೇಕು, ಆಟವಾಡಿಸಬೇಕು, ಊಟ ಮಾಡಿಸಬೇಕು. ಹೂಂ..ಇವ್ರ ಮಕ್ಕಳು ಎಷ್ಟು ಬೇಗ ಎಲ್ಲಾ ಜವಾಬ್ದಾರಿಯನ್ನ ಕಲಿತು ಬಿಡ್ತಾರೆ ಅಲ್ವಾ?. ಅದೇ ನಮ್ಮ ಮಕ್ಕಳಿಗೆ ನಾವೇ ಇಷ್ಟು ಬೇಗ ಏನೂ ಜವಾಬ್ದಾರಿ ಕೊಡೋದಿಲ್ಲಾ ಅಂದ ಮೇಲೆ ಅವ್ರಿಗಾದ್ರೂ ಹ್ಯಾಗೆ ಬರಬೇಕು? ಸರಿ, ಆಕೆ ಹಾಡು ಹೇಳುತ್ತಿದ್ದರೂ ಮಗು ಮಾತ್ರ ಜೋರಾಗೇ ಕಿರುಚ್ತಾ ಇತ್ತು. ಮಗುವಿನ ಕಿರುಚಾಟ ಕೇಳಿ ತುಂಬಾ ದಿನಗಳಾದಕ್ಕೋ ಇಲ್ಲಾ ಆ ಹುಡುಗಿಯ ಪರದಾಟ ನೋಡಿಯೋ ನನಗೂ ತಡಿಯೋಕಾಗ್ಲಿಲ್ಲ. ಯಾಕಮ್ಮಾ. ಅಳ್ತಾ ಇದ್ದಾಳೆ? ಅಂತ ಅವಳಿದ್ದಲ್ಲಿ ಹೋಗಿ ಕೇಳಿದೆ. 'ಇವಳಿಗೆ ಹಸಿವೆ ಆಗಿದೆ ಆಂಟಿ.. ಅಮ್ಮ ಇನ್ನೂ ಕೆಲಸದಿಂದ ಬಂದಿಲ್ಲ'. ಎನ್ನುತ್ತಾ ಮುಖ ಚಿಕ್ಕದು ಮಾಡಿಕೊಂಡು ಮತ್ತೆ ಆ ಪೋರಿಯನ್ನು ಸುಮ್ಮನಾಗಿಸಲು ಪ್ರಯತ್ನಿಸಿದಳು.. ಅವಳ ಆ ಜವಾಬ್ದಾರಿಯುತ ಮುಖ ಭಾವ ಕಂಡು ಆಶ್ಚರ್ಯ ಪಟ್ಟೆ. ಗಾಡಿಯ ಬಾಗಿಲು ತೆಗೆದು ಒಂದು ಪೇಸ್ಟ್ರೀ ಮತ್ತೆ ಚಾಕಲೇಟ್ ಕೊಡಲು ಹೋದಾಗ– 'ಬೇಡಾ ಆಂಟಿ.. ಅಮ್ಮ ಬರ್ತಾಳೆ, ಏನಾದ್ರೂ ತರ್ತಾಳೆ' ಎನ್ನುತ್ತಾ ಅಲ್ಲಿಂದ ಹೋಗಲು ನೋಡಿದಳು. ನಾನೂ ಬಿಡಲಿಲ್ಲ.. 'ಪರವಾಗಿಲ್ಲಾ ತೊಗೋ..ಅಮ್ಮ ಇನ್ನೂ ಬಂದಿಲ್ಲಾ ತಾನೇ.. ನೀನೂ ತಿನ್ನು, ಅವಳಿಗೂ ತಿನ್ನಿಸು' ಎಂದಾಗ ಒಲ್ಲದ ಮನಸಿನಿಂದ ತೆಗೆದುಕೊಂಡಳು. ಇಷ್ಟೇ.. ನನ್ನ ಅವಳ ಪರಿಚಯ. ಅದಾದ ಮೇಲೆ ಒಂದೆರಡು ಬಾರಿ ಅಲ್ಲಿಗೆ ಹೋದರೂ ನಾವಳನ್ನ ನೋಡಿರಲಿಲ್ಲ. ಹಾಗಾಗಿ ಅವಳ ಬಗ್ಗೆ ಮರೆತೇ ಬಿಟ್ಟಿದ್ದೆ.

ಇಂದು ನಾನು ಬಂದಾಗ ಅದೇ ಮರದ ಕೆಳಗೆ ಕುಳಿತು ಮಣ್ಣಾಟ ಆಡ್ತಾ ಇದ್ಲು ಅನಿಸುತ್ತೆ. ನನ್ನ ಕಾರನ್ನು ನೋಡಿ ಬಲು ಖುಷಿಯಿಂದ 'ಹಾಂ.. ಹಾಂ.. ಠೀಕ್ ಹೈ ಆಂಟೀ ..ಠೀಕ್ ಹೈ ..ಬಸ್ ಬಸ್' ಎಂದು ಮುಂದೆ ಬಂದು ನನಗೆ ಸಹಾಯ ಮಾಡಿದಳು. ಅವಳನ್ನು ಮತ್ತೊಮ್ಮೆ ದಿಟ್ಟಿಸಿ ನೋಡಿದಾಗ ಗುರುತು ಸಿಕ್ತು. ಅಂದು ಹಸಿವೆಯಿಂದ ಮುಖ ಬಾಡಿತ್ತು, ಇಂದು ಸಂತಸದಿಂದ ಮುಖವರಳಿತ್ತು. ಆಕೆ ಒಂದು ಚಿಕ್ಕ ಪ್ಲೈ ವುಡ್ಡಿನ ತುಂಡನ್ನು ಇಟ್ಟುಕೊಂಡು ಒಂದು ಪ್ಲಾಸ್ಟಿಕ್ ಕಪ್ಪಿನಲ್ಲಿ ಮಣ್ಣನ್ನು ಹಾಕುತ್ತಾ ಏನೋ ಮಾಡ್ತಾ ಇದ್ಲು. ಇಂದು ತಂಟೆ ಮಾಡದೇ ಅವಳ ತಂಗಿ ಮೂಲೆಯಲ್ಲಿದ್ದ ನೀವಾರ್ ಕಾಟಿನ ಮೇಲೆ ಆರಾಮಾಗಿ ಮಲಗಿದ್ದಳು. ಅವಳ ಕೈಯಲ್ಲಿದ್ದ ಮೃದುವಾದ ಮಣ್ಣು ನೋಡಿ ನನಗೂ ಅದನ್ನು ಮುಟ್ಟಬೇಕೆನಿಸಿತು. ಆಹಾ.. ತಂಪಾದ ಮೆತ್ತನೆಯ ಮಣ್ಣು, ಬಾಲ್ಯದಲ್ಲಿ ಮಣ್ಣಾಟವಾಡಿದ್ದು ನೆನೆಪಿಗೆ ಬಂತು. ದೆಹಲಿಯಲ್ಲಿ ನಮ್ಮ ಮಕ್ಕಳಿಗೂ ಅ ರೀತಿ ಮಣ್ಣಾಟವಾಡೋಕೆಲ್ಲಿ ಸಿಗುತ್ತೆ ಹೇಳಿ ?. 'ಆರತಿ, ಏನು ಮಾಡ್ತಾ ಇದ್ದೀಯಾಂತ ಕೇಳಿದೆ'. ಅದಕ್ಕೆ ಅವಳು 'ಆಂಟೀ, ಅವತ್ತು ನೀವು ನಂಗೆ ಕೊಟ್ಟ ಕೇಕ್ ಹೀಗೇ ಇತ್ತು ಅಲ್ವಾ' ಎಂದು ತೋರಿಸಿದಳು. ಎಂದೋ ತಿಂದ ಕೇಕನ್ನು ನೆನೆಯುತ್ತಾ ಆಟವಾಡುತ್ತಿದ್ದ ಹುಡುಗಿಯನ್ನು ನೋಡಿ ಹೃದಯ ಭಾರವಾಯ್ತು. 'ಹೌದಮ್ಮ' ಎನ್ನುತ್ತ ನಾನೂ ಮಣ್ಣಿನಲ್ಲಿ ಕೈ ಹಾಕಿದೆ. ಆಕೆ ಖುಷಿಯಿಂದ "ಆಂಟೀ..ನಿಮಗೂ ಮಣ್ಣು ಸೇರುತ್ತಾ" ಬೇಕಾದ್ರೆ ನೀವಿದನ್ನ ತೊಗೊಂಡು ಹೋಗಿ ಎನ್ನುತ್ತಾ ತಾನು ಮಾಡಿದ ಮಣ್ಣಿನ ಕೇಕನ್ನು ಕೊಡಲು ಬಂದಳು. ಆ ಪುಟ್ಟ ಜೀವದ ಉದಾರತೆ ಮೆಚ್ಚತಕ್ಕದ್ದು. 'ಬೇಡಮ್ಮ.. ನೀನೇ ಇಟ್ಕೋ'ಎಂದಾಗ, 'ಈ ಮಣ್ಣನ್ನ ನಿಮ್ಮನೆ ಪಾಟ್ ಗೆ ಹಾಕಿ ಆಂಟಿ, ಚೆನ್ನಾಗಿ ಹೂವು ಬಿಡುತ್ತೆ' ಎಂದು ಮತ್ತೆ ಕೊಡಲು ಬಂದಳು. ಅವಳಿಗೆ ಹ್ಯಾಗಪ್ಪಾ ಬೇಡ ಅನ್ನೋದು ಅಂತ ಎದ್ದು ನಿಂತೆ. 'ಮತ್ತೊಮ್ಮೆ ಬಂದಾಗ ತೊಗೊಂಡು ಹೋಗ್ತೀನಿ ಆಯ್ತಾ. ಥ್ಯಾಂಕ್ಯೂ'


ಎನ್ನುತ್ತಾ ಕೈ ಒರೆಸಿಕೊಳ್ಳುತ್ತಾ ತಿರುಗಿ ನೋಡಿದಾಗ ಆಕೆಯ ತಾಯಿ ನಗುತ್ತಾ ನಿಂತಿದ್ದಳು. 'ಮ್ಯಾಡಮ್ ಜೀ.., ನನ್ನ ಮಗಳನ್ನೂ ನಿಮ್ಮನೇಗೆ ಕರೆದು ಕೊಂಡು ಹೋಗಿ. ಊರಿಂದ ಬಂದಾಗಿನಿಂದ ನಿಮ್ಮ ದಾರಿ ಕಾಯ್ತಾ ಇದ್ದಾಳೆ' ಎಂದಳು. ಅವಳಿಗೆ ಏನು ಹೇಳ ಬೇಕೋ ತಿಳಿಯದೆ, ಆ ಪುಟ್ಟು ಹುಡುಗಿಯ ತಲೆ ಮೇಲೆ ಕೈಯಾಡಿಸಿ, 'ಓ.. ಹಾಗೇ ಆಗ್ಲಿ.. ನಿಮ್ಮ ಮಗಳು ತುಂಬಾ ಜಾಣೆ, ದೇವ್ರು ಒಳ್ಳೇದು ಮಾಡ್ಲಮ್ಮ' ಎನ್ನುತ್ತಾ ಮಣ್ಣಿನಿಂದ ಮುಂದೆ ಹೋದೆ.

ಎಷ್ಟೋ ಜನರಿಗೆ ನಾವು ಸಹಾಯ ಮಾಡಿರ್ತೇವೆ. ಅನ್ಯರಿಂದ ಪಡೆದ ಉಪಕಾರವನ್ನು ಸಜ್ಜನರು ಎಂದಿಗೂ ಮರೆಯುವುದಿಲ್ಲ ಅಂತಾರಲ್ಲ ಅದು ಸುಳ್ಳಲ್ಲ. ಕೆಲವೊಮ್ಮೆ ವಿದ್ಯಾವಂತರು ಅನಿಸಿಕೊಂಡವ್ರೇ ತಮ್ಮ ಕೆಲಸವಾದ ಬಳಿಕ ನಮ್ಮ ಮುಖ ನೋಡಿದ್ರೂ ದೂರ ಓಡಿ ಹೋಗ್ತಾರೆ ಅನ್ನೋದು ನಿಜ. ಆದರೆ ಆರತಿಯ ತಂದೆ ತಾಯಿ ಅವಿದ್ಯಾವಂತರು, ಕೂಲಿಕೆಲಸ ಮಾಡುವವರು ಆಗಿದ್ದರೂ ಸಹ ತಮ್ಮ ಮಗಳಿಗೆ ಒಳ್ಳೆಯ ಸಂಸ್ಕಾರ ನೀಡಿದ್ದನ್ನು ನೋಡಿ ತುಂಬಾ ಖುಶಿಯಾಯ್ತು. ಮುಗ್ಧಮನದ ಬಾಲೆ ನನ್ನ ಮನ ಗೆದ್ದಳು.


ನಮ್ಮ ಭಾವನೆಯ ಬಳ್ಳಿಗೆ ಪುಟ್ಟ ಆರತಿ ಕೊಟ್ಟ ಮೃದುವಾದ ಮಣ್ಣನ್ನ ಹಾಕ್ತಾ ಇದ್ದೇನೆ. ಮುಂದಿನ ತಿಂಗಳಿಗೆ ಖಂಡಿತ ಒಂದು ಹೊಸ ಎಲೆ ಚಿಗುರೇ ಚಿಗುರುತ್ತೆ ಅನ್ನೋ ಭರವಸೆ ನನಗಿದೆ . ಅ

***ಸವಿತಾ ಇನಾಮದಾರ್***

# ದೆಹಲಿ ಕನ್ನಡ ಎಜ್ಯುಕೇಶನ್ ಸೊಸೈಟಿಗೆ ಹೊಸ ಆಡಳಿತ ಸಮಿತಿ ಆಯ್ಕೆ


ಡಾ. ವಿ.ಆರ್. ಗುಡ್ಡೇ ಗೌಡ


ಆಶಾ ಕಾರಿಯಪ್ಪ


ಕೆ.ಆರ್. ರಾಮಮೂರ್ತಿ


ಸಿ.ಆರ್. ಶ್ರೀನಿವಾಸ


ಟಿ.ಎಂ. ಮೈಲಾರಪ್ಪ

ದೆಹಲಿಯ ಕನ್ನಡ ಸೀನಿಯರ್ ಸೆಕೆಂಡರಿ ಶಾಲೆಯ ಆಡಳಿತ ನಡೆಸುತ್ತಿರುವ ದೆಹಲಿ ಕನ್ನಡ ಎಜುಕೇಶನ್ ಸೊಸೈಟಿಗೆ ಹೊಸ ಆಡಳಿತ ಸಮಿತಿಯ ಆಯ್ಕೆಯು ಇದೇ ಸಪ್ಟಂಬರ್ 28ರಂದು ನಡೆದ ಮಹಾಸಭೆಯಲ್ಲಿ ಚುನಾವಣೆಯ ಮೂಲಕ ನಡೆಯಿತು.

ಕಾಫೀ ಬೋರ್ಡ್ ಆಫ್ ಇಂಡಿಯಾದಲ್ಲಿ ವಿಶೇಷ ಅಧಿಕಾರಿಯಾಗಿರುವ ಡಾ. ವಿ.ಆರ್. ಗುಡ್ಡೇ ಗೌಡ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಆರೋಗ್ಯ ಮತ್ತು ಕುಟುಂಬ ಖಾತೆಯಲ್ಲಿ ಉದ್ಯೋಗಸ್ಥರಾಗಿರುವ ಶ್ರೀ ಸಿ.ಆರ್. ಶ್ರೀನಿವಾಸ ಅವರು ಕಾರ್ಯದರ್ಶಿಯಾಗಿ ಆಯೆಯಾಗಿದ್ದಾರೆ. ಶಿಕ್ಷಣ ತಜ್ಞೆ ಶ್ರೀಮತಿ ಆಶಾ ಕಾರಿಯಪ್ಪ ಮತ್ತು ಮಾಕ್ಸ್ ಲೈಫ್ ಇನ್ಶೂರೆನ್ಸ್ ಕಂಪೆನಿಯಲ್ಲಿ ತನಿಖಾ ಅಧಿಕಾರಿಯಾಗಿರುವ ಶ್ರೀ ಕೆ.ಆರ್. ರಾಮಮೂರ್ತಿ ಅವರು ಉಪಾಧ್ಯಕ್ಷರಾಗಿದ್ದಾರೆ. ದೆಹಲಿ ಪೊಲೀಸ್‌ನಲ್ಲಿ ವೃತ್ತಿಯಲ್ಲಿರುವ ಶ್ರೀ ಟಿ.ಎಂ. ಮೈಲಾರಪ್ಪ ಅವರು ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ. ಸಮಿತಿಗೆ ಆಯ್ಕೆಯಾದ ಸದಸ್ಯರು: ಡಾ. ವೆಂಕಟಾಚಲ ಹೆಗಡೆ, ಶ್ರೀ ಬಿ. ನಾರಾಯಣ, ಶ್ರೀ ಕಾಶೀನಾಥ್ ಬಿ. ಬಿರಾದಾರ್, ಡಾ. ಅಶೋಕ್ ಎಸ್. ಗೊನಾಲ್, ಶ್ರೀ ಎಸ್.ಡಿ. ಶ್ರೀನಿವಾಸ್, ಶ್ರೀ ಜಿ.ಎಂ. ಹನುಮೇ ಗೌಡ, ಶ್ರೀ ಕುಮಾರ್ ಸಿ, ಶ್ರೀ ಎಂ. ಶಿವರಾಮ ರೈ, ಶ್ರೀ ಶ್ರೀಹರಿ ಮತ್ತು ಡಾ. ಪುರುಷೋತ್ತಮ ಬಿಳಿಮಲೆ. ಅ



## ಆತ್ಮೀಯ ಬೀಳ್ಕೊಡುಗೆ

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರುಗಳಾದ ಶ್ರೀ ದೇವೇಂದಪ್ಪ, ಶ್ರೀ ಕೇಶವ ಮೂರ್ತಿ, ಶ್ರೀಮತಿ ಮಂಜುಳಾ ಶಿವರಾಮ್ ಅವರುಗಳು ದೆಹಲಿ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಇದೀಗ ವೃತ್ತಿಯಲ್ಲಿ ಭಡ್ತಿ ಪಡೆದು ಬೆಂಗಳೂರಿಗೆ ತೆರಳುತ್ತಿರುವ ಸಂದರ್ಭದಲ್ಲಿ ಅಕ್ಟೋಬರ್ 2ರಂದು ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯು ಆತ್ಮೀಯವಾಗಿ ಅಭಿನಂದಿಸಿ ಬೀಳ್ಕೊಟ್ಟಿತು. ಅ

## ವಧು-ವರರ ಮಾಹಿತಿ

ಕರ್ನಾಟಕದಿಂದ ದೆಹಲಿಗೆ ಬಂದು ನೆಲೆನಿಂತ ಹಲವಾರು ಕನ್ನಡಿಗರು ಹತ್ತು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಲೇ ಬಂದಿರುತ್ತಾರೆ. ಇದರಲ್ಲಿ ಮುಖ್ಯವಾಗಿ ತಮ್ಮ ಮಕ್ಕಳ ವಿವಾಹದ ಕುರಿತು ಹೆಚ್ಚು ಸಮಸ್ಯೆಗಳಿಗೆ ಒಳಗಾಗುತ್ತಾರೆ. ಇದನ್ನು ಮನಗಂಡ ದೆಹಲಿ ಕರ್ನಾಟಕ ಸಂಘವು ಹುಡುಗ-ಹುಡುಗಿಯರ ಮಾಹಿತಿಯನ್ನು ಸಂಗ್ರಹಿಸುತಿದೆ.

ದೆಹಲಿಯಲ್ಲಿರುವ ಕರ್ನಾಟಕದ ಪೋಷಕರು/ಹುಡುಗ/ಹುಡುಗಿಯರು ಪ್ರತಿ ಭಾನುವಾರ ಸಂಜೆ ಸಂಘದ ಕಾರ್ಯಾಲಯಕ್ಕೆ ಬಂದು ಸಂಘದಲ್ಲಿರುವ ಮಾಹಿತಿಯನ್ನು ನೋಡಬಹುದು. ಹಾಗೂ ಮಾಹಿತಿಯನ್ನು ನೋಂದಾಯಿಸಬಹುದು. ನೋಂದಣಿ ಉಚಿತವಾಗಿರುತ್ತದೆ. ವೈವಾಹಿಕ ಸಂಬಂಧಗಳ ಕುರಿತು ಪೋಷಕರು/ಹುಡುಗ/ಹುಡುಗಿಯರು ಪರಸ್ಪರ ವ್ಯವಹರಿಸಿಕೊಳ್ಳತಕ್ಕದ್ದು. ಸಂಬಂಧಗಳ ಕುರಿತು ಸಂಘ ಯಾವುದೇ ರೀತಿಯ ವ್ಯವಹಾರ ಮಾಡುವುದಿಲ್ಲ ಮತ್ತು ಜವಾಬ್ದಾರರಾಗುವುದಿಲ್ಲ.

# ಬಂಟ್ಸ್ ಕಲ್ಚರಲ್ ಅಸೋಸಿಯೇಶನ್‌ನ ವಾರ್ಷಿಕ ಮಹಾಸಭೆ

ಬಂಟ್ಸ್ ಕಲ್ಚರಲ್ ಅಸೋಸಿಯೇಶನ್ ವಾರ್ಷಿಕ ಮಹಾಸಭೆಯು 14 ಸೆಪ್ಟಂಬರ್ 2014ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ 2014-16ನೇ ಸಾಲಿಗೆ ನೂತನ ಕಾರ್ಯಕಾರಿ ಸಮಿತಿಯ ಸರ್ವಾನುಮತದಿಂದ ಆರಿಸಲಾಯಿತು.

**ಅಧ್ಯಕ್ಷರು**-ಶ್ರೀ ಎನ್.ಎಂ. ಶೆಟ್ಟಿ, **ಉಪಾಧ್ಯಕ್ಷರು**-ಶ್ರೀ ಸುರೇಶ್ ಶೆಟ್ಟಿ ಮತ್ತು ಅಂಬಾಸೆಡರ್ ಬಾಲಕೃಷ್ಣ ಶೆಟ್ಟಿ, **ಕಾರ್ಯದರ್ಶಿ**-ಶ್ರೀ ಪ್ರೇಮನಾಥ ರೈ, **ಜಂಟಿ ಕಾರ್ಯದರ್ಶಿಗಳಾಗಿ** ಶ್ರೀ ಟಿ. ಶಿವಪ್ರಸಾದ್ ಶೆಟ್ಟಿ, ಶ್ರೀ ಕೆ.ಎಸ್.ಜಿ. ಶೆಟ್ಟಿ ಮತ್ತು ಡಾ. ಸಾಯಿಪ್ರಶಾಂತಿ ಶೆಟ್ಟಿ.


**ಸದಸ್ಯರುಗಳು** : ಶ್ರೀ ಸಂಜೀವ ಬಿ. ಶೆಟ್ಟಿ, ಶ್ರೀ ಅಲೋಕ್ ರೈ, ಶ್ರೀಮತಿ ಅಂಜಲಿ ಹೆಗ್ಡೆ, ಶ್ರೀ ದೀಪಕ್ ಶೆಟ್ಟಿ, ಶ್ರೀ ಎಂ. ದಿವಾಕರ ಶೆಟ್ಟಿ, ಶ್ರೀಮತಿ ಜಯಲಕ್ಷ್ಮೀ ಶೆಟ್ಟಿ, ಶ್ರೀ ಕಿಷನ್ ಪ್ರಸಾದ್ ಆಳ್ವ, ಶ್ರೀ ಕಿಶೋರ್ ಹೆಗ್ಡೆ, ಶ್ರೀ ಎಂ. ಶಿವರಾಮ ರೈ, ಕ್ಯಾಪ್ಟನ್ ಎಂ.ಎಸ್. ಅಡ್ಯಂತಾಯ, ಶ್ರೀಮತಿ ಸ್ವೀಟಿ ಶೆಟ್ಟಿ, ಶ್ರೀ ವಿಜಯಶಂಕರ್ ರೈ, ಜಸ್ಟೀಸ್ ಶ್ರೀ ಪಿ. ವಿಶ್ವನಾಥ ಶೆಟ್ಟಿ. ಅ


ಎನ್.ಎಂ. ಶೆಟ್ಟಿ


ಪ್ರೇಮನಾಥ ರೈ.

# ಕರ್ನಾಟಕ ರೆಸ್ಟೋರೆಂಟ್

ರಾಷ್ಟ್ರೀಯ ರಾಜಧಾನಿ ಪ್ರದೇಶ ಗುರ್‌ಗಾಂವ್‌ನ ಸೆಕ್ಟರ್-22ರಲ್ಲಿ ಕರ್ನಾಟಕ ರೆಸ್ಟಾರೆಂಟ್ ಆರಂಭವಾಗಿದೆ. ದಹೆಲಿ ಕರ್ನಾಟಕ ಸಂಘದ ಆಜೀವ ಸದಸ್ಯರುಗಳಾದ ಹೋಟೆಲ್ ಉದ್ಯಮಿ ಶ್ರೀ ಪ್ರಭಾಕರ ಬಂಗೇರ ಮತ್ತು ಶ್ರೀ ಪ್ರದೀಪ್ ಪೂಜಾರಿ ಅವರು ಸೇರಿ ದೆಹಲಿಯ ಪ್ರಸಿದ್ಧ ಕರ್ನಾಟಕ ರೆಸ್ಟಾರೆಂಟಿನ ಹೊಸ ಶಾಖೆಯನ್ನು ಆರಂಭಿಸಿ ದಕ್ಷಿಣ ಭಾರತದ ಊಟ ಮತ್ತು ತಿಂಡಿ ತಿನಿಸುಗಳು ಗುರ್‌ಗಾಂವ್‌ನಲ್ಲಿಯೂ ಸಿಗುವಂತೆ ಮಾಡಿದ್ದಾರೆ. ಅ



# ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ವಾರ್ಷಿಕ ಮಹೋತ್ಸವ

ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ವಾರ್ಷಿಕ ಮಹೋತ್ಸವ ಹಾಗೂ ಗಣೇಶೋತ್ಸವ ಕಾರ್ಯಕ್ರಮಗಳು ಇತ್ತೀಚೆಗೆ ದೆಹಲಿಯ ಅಶೋಕ್ ವಿಹಾರ್‌ನಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಕೋಲಾರದ 'ಈ ಭೂಮಿ ಕಲಾ' ತಮಟೆ ಕಲಾತಂಡ, ಮಾಲೂರು ಅವರಿಂದ ತಮಟೆ ವಾದನ ಮತ್ತು ಗೀತಾ ಗಾಯತ್ರಿ ನಾಟ್ಯಕಲಾ ಅಕಾಡೆಮಿ, ಬೆಂಗಳೂರು ತಂಡದಿಂದ ಕನಕದಾಸರ ಕೃತಿಗಳಿಗೆ ನೃತ್ಯರೂಪಕ ಹಾಗೂ ಜಾನಪದ ನೃತ್ಯಗಳನ್ನು ನಡೆಸಲಾಯಿತು.

ದೆಹಲಿಯ ಶಹದಾರ ಜಿಲ್ಲಾ ನ್ಯಾಯಲಯ ಕರ್ಕರ್‌ಡೂಮಾದಲ್ಲಿ ಅಡಿಶನಲ್ ಜಿಲ್ಲಾ ನ್ಯಾಯಾಧೀಶರಾಗಿರುವ ಶ್ರೀ ಎ.ಎಸ್. ಜಯಚಂದ್ರ ಅವರು ಸಮಾರಂಭದ ಮುಖ್ಯ ಅತಿಥಿಯಾಗಿದ್ದರು. ಶ್ರೀ ಜಯಚಂದ್ರ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ ದೆಹಲಿ ಪೋಲಿಸ್ ಕನ್ನಡಿಗರು ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡದ ಉಳಿಸಿ ಬೆಳೆಸಿಕೊಂಡು ಈ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ನಮ್ಮ ಭಾಗ್ಯ. ಇಂತಹ ಕಾರ್ಯಕ್ರಮಗಳು ಹೀಗೆಯೇ ಮುಂದುವರಿಯಲಿ ಎಂದು ಆಶಿಸಿ ಕಾರ್ಯಕ್ರಮಕ್ಕೆ ಶ್ರಮಿಸಿದವರಿಗೆ ವಂದನೆಗಳನ್ನು ಸಲ್ಲಿಸಿದರು.

ಹಿರಿಯ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆಯವರು ಮಾತನಾಡುತ್ತಾ ಕನ್ನಡ, ಸಂಸ್ಕೃತಿ, ಸಾಹಿತ್ಯವನ್ನು ನಾವು ಈ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಉಳಿಸಿ ಬೆಳೆಸಿಕೊಂಡು ಬರುತ್ತಿದ್ದೇವೆ ಎಂದು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಎಲ್ಲ ಸದಸ್ಯರುಗಳು ಇಂತಹ ಕಾರ್ಯಕ್ರಮವನ್ನು ಸಾಧ್ಯವಾಗಿ ಮಾಡಿದ್ದಾರೆ. ಇದು ಒಂದು ಸುಂದರ ಕಾರ್ಯಕ್ರಮ ಹಾಗೂ ದೆಹಲಿ ಕರ್ನಾಟಕ ಸಂಘವು "ಮನೆ ಬಾಗಿಲಿಗೆ ಕಾರ್ಯಕ್ರಮ"ದಲ್ಲಿ ಅಶೋಕ್ ವಿಹಾರ್‌ನಲ್ಲಿ ಕಾರ್ಯಕ್ರಮವನ್ನು ನಡೆಸುವ ಪ್ರಯತ್ನದಲ್ಲಿದ್ದೇವೆ ಎಂದು ತಿಳಿಸಿದರು.

ನ್ಯಾಯವಾದಿ ಶ್ರೀ ಇ.ಸಿ. ವಿದ್ಯಾಸಾಗರ್ ಅವರು ಮಾತನಾಡುತ್ತಾ ನಾನು ದೆಹಲಿಯಲ್ಲಿ ಹಲವಾರು ಕಾರ್ಯಕ್ರಮವನ್ನು ವೀಕ್ಷಿಸುತ್ತಿದ್ದೇನೆ. ಪೋಲಿಸ್ ಕಲ್ಯಾಣ ಸಮಿತಿಯವರ ಈ ಕಾರ್ಯಕ್ರಮ ಒಂದು ಒಳ್ಳೆಯ ಸಾಧನೆ ಎಂದು ನುಡಿದರು.

ಇದೇ ಸಂದರ್ಭದಲ್ಲಿ ಪೋಲಿಸ್ ಸೇವೆಯಿಂದ ನಿವೃತ್ತಿಯಾದ ಶ್ರೀ ಪಿ.ಎಂ. ಗಣೇಶ್ ಅವರನ್ನು ಅಭಿನಂದಿಸಲಾಯಿತು.

ಅಧ್ಯಕ್ಷತೆಯನ್ನು ವಹಿಸಿದ ದೆಹಲಿ ಪೊಲೀಸ್‌ನಲ್ಲಿ ಡೆಪ್ಯೂಟಿ ಕಮಿಶನರ್ ಆಫ್ ಪೊಲೀಸ್ ಆಗಿರುವ ಶ್ರೀ ಬಿ.ಎಲ್. ಸುರೇಶ್ ಅವರು ಮಾತನಾಡುತ್ತಾ ನಾವು ದೆಹಲಿ ಪೋಲಿಸ್ ಕಲ್ಯಾಣ ಸಮಿತಿಯು ಪೊಲೀಸ್ ಕುಟುಂಬಗಳ ಕಷ್ಟಕಾಲದಲ್ಲಿ ಎಲ್ಲಾ ಸದಸ್ಯರುಗಳನ್ನು ಒಂದುಗೂಡಿಸುವ ಕೆಲಸ ಮಾಡಿದೆ. ದೆಹಲಿಯಲ್ಲಿ ಕೆಲಸದ ವೇಳೆ ಮರಣಕ್ಕೆ ಈಡಾದರೆ, ಅಂತಹವರನ್ನು ತನ್ನ ತಾಯಿನಾಡಿಗೆ ಕಳುಹಿಸಿಕೊಡುವ ಕೆಲಸವನ್ನೂ ಮಾಡುತಿದೆ ಎಂದರು. ದೆಹಲಿಯ ಪೊಲೀಸರು ಒಗ್ಗಟ್ಟಿನಿಂದ ಕೆಲಸ ಮಾಡಿ, ಹೆಸರು ಗಳಿಸಿ ನಮ್ಮ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸಬೇಕೆಂದು ಹೇಳಿದರು.

ಶ್ರೀ ಬಿ.ಎಲ್. ಸುರೇಶ್ ಅವರು ಈ ಕಾರ್ಯಕ್ರಮದ ಎಲ್ಲ ಖರ್ಚು ವೆಚ್ಚಗಳನ್ನು ವಹಿಸಿದ್ದರು. ಡೆಪ್ಯೂಟಿ ಕಮಿಶನರ್ ಆಫ್ ಪೊಲೀಸ್ ಶ್ರೀ ಎಸ್.ಪಿ. ಹರೀಶ್ ಅವರು ಕಾರ್ಯಕ್ರಮ ಯಶಸ್ವಿಯಾಗುವಲ್ಲಿ ಸಹಕರಿಸಿದ್ದರು. ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಅಧ್ಯಕ್ಷ ಶ್ರೀ ರಾಜ್‌ಕುಮಾರ್ ಅವರು ಸ್ವಾಗತಿಸಿದರು ಹಾಗೂ ಕಾರ್ಯದರ್ಶಿ ಶ್ರೀ ಎಸ್. ಗಿರೀಶ್ ಅವರು ವಂದನಾರ್ಪಣೆ ಸಲ್ಲಿಸಿದರು. ಅ

*ಸಿ.ಎಂ. ನಾಗರಾಜ*





















# ಸಂಘದಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳು




















# ಮುಗಿಸುವ ಮುನ್ನ

















## ಬೆಳ್ಳಿ ಸಂಪುಟ

ಅಕ್ಟೋಬರ್ 2 ಭಾರತದ ರಾಷ್ಟ್ರಪಿತ ಮಹಾತ್ಮಾ ಗಾಂಧಿ ಅವರು ಹುಟ್ಟಿದ ದಿನ. ಮಹಾನ್ ವ್ಯಕ್ತಿಗಳು ಹುಟ್ಟಿದ ದಿನವನ್ನು ಪವಿತ್ರ ಹಾಗೂ ಅದೃಷ್ಟದ ದಿನವೆಂದು ನಂಬುತ್ತೇವೆ. ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಹೊಂದಿದ್ದ ಬ್ರಿಟಿಷರ ವಿರುದ್ಧ ಸತ್ಯ ಮತ್ತು ಅಹಿಂಸೆಯ ಆಯುಧಗಳಿಂದ ಹೋರಾಡಿ ದೇಶಕ್ಕೆ ಸ್ವಾತಂತ್ರವನ್ನು ತಂದು ಕೊಟ್ಟ ಮಹಾತ್ಮಾ ಗಾಂಧಿ ಭಾರತೀಯರಿಗೆ ಮಾತ್ರವಲ್ಲ, ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕತೆಯನ್ನು ಗೌರವಿಸುವ ಜಗತ್ತಿನ ಪ್ರತಿಯೊಬ್ಬ ಪ್ರಜೆಗೂ ಸ್ಫೂರ್ತಿದಾಯಕ ಮತ್ತು ಆದರ್ಶಪ್ರಾಯರಾಗಿದ್ದಾರೆ. ಕಾರ್ಯ ಚಿಕ್ಕದೇ ಇರಲಿ, ದೊಡ್ಡದೇ ಇರಲಿ ಅಕ್ಟೋಬರ್ 2ರಂದು ನಡೆದರೆ ಅದಕ್ಕೆ ಮಹಾತ್ಮನ ಆಶೀರ್ವಾದವಿದೆ ಎಂಬ ನಂಬಿಕೆ. ಈ ಸಲ ಗಾಂಧಿಜಯಂತಿಯಂದು ಸ್ವಚ್ಛ ಭಾರತ ಅಭಿಯಾನವನ್ನು ಭಾರತದ ಸರಕಾರವು ಆರಂಭಿಸಿತು.

ಗಾಂಧೀಜಿಯವರ ಕುರಿತು ಗೌರವ ಮತ್ತು ಹೆಮ್ಮೆ ಭಾರತದ ಪ್ರತಿಯೊಬ್ಬ ಪ್ರಜೆಗೂ ಇರಬೇಕು. ಇಪ್ಪತ್ತೈದು ವರ್ಷಗಳ ಹಿಂದೆ ಅಂತಹದೇ ಒಂದು ದಿನ ದೆಹಲಿ ಕರ್ನಾಟಕ ಸಂಘದ ಇತಿಹಾಸದಲ್ಲಿ ಮೈಲಿಗಲ್ಲಾಗುವ ದಿನವಾಗಿತ್ತು. ಅದು 1990ರ ಅಕ್ಟೋಬರ್ 2ರ ದಿನ. ಕನಸುಗಳನ್ನು ಹೊತ್ತುಕೊಂಡು ಕನ್ನಡ ಮಣ್ಣಿನಿಂದ ಸಾವಿರಾರು ಮೈಲು ದೂರದಲ್ಲಿದ್ದು, ದೇಶದ ರಾಜಧಾನಿಯಲ್ಲಿ ಕನ್ನಡದ ಪರಿಮಳವನ್ನು ಬೀರುವಂತಹ ಕೆಲಸಗಳನ್ನು ಮಾಡುತ್ತಿದ್ದ ದೆಹಲಿ ಕರ್ನಾಟಕ ಸಂಘದ ಆಡಳಿತದ ನೇತೃತ್ವಹೊಂದಿದ್ದ ದೂರದರ್ಶಿಗಳು, ಉತ್ಸಾಹಿ ತರುಣರ ಜತೆ ಸೇರಿ ಅಭಿಮತ ಎನ್ನುವ ಪತ್ರಿಕೆಯನ್ನು ಪ್ರಕಟಿಸಿದರು. ಉತ್ಸಾಹ–ಉದಾಸೀನಗಳು, ಪ್ರೀತಿ–ನಿರಾಸಕ್ತಿಗಳು, ಬದುಕಿನ ಏರುಪೇರುಗಳಂತೆ ಅಭಿಮತದ ಈ ಇಪ್ಪತ್ತೈದು ವರ್ಷಗಳಲ್ಲಿಯೂ ಕಂಡು ಬಂದಿವೆ. ಆರಂಭದಿಂದಲೂ ಸಂಪಾದಕ ಮಂಡಳಿ ಮತ್ತು ಕಾರ್ಯಕಾರಿ ಸಮಿತಿಯು ಅಭಿಮತವನ್ನು ಅತ್ಯಂತ ಅಕ್ಕರೆಯಿಂದ ಬೆಳೆಸಿವೆ. ಇದುವರೆಗಿನ ಸಂಪುಟಗಳ ಸಂಚಿಕೆಗಳ ಮೇಲೆ ಕಣ್ಣಾಡಿಸಿದರೆ ಆ ಮಮತೆ ಮತ್ತು ಒಲವನ್ನು ಕಾಣಬಹುದು.

ಈ ಅಕ್ಟೋಬರ್ 2014ರ ಸಂಚಿಕೆಯು ಅಭಿಮತದ 25ನೇ ಸಂಪುಟದ ಮೊದಲ ಸಂಚಿಕೆಯಾಗಿದೆ. ಈ ಮಹತ್ತರ ಕಾಲಘಟ್ಟದಲ್ಲಿ ಈ ಹಿಂದೆ ಅಭಿಮತದ ಜತೆ ಸೇರಿದ್ದವರಿಗೆ ಹಾರ್ದಿಕ ಅಭಿನಂದನೆಗಳು. ಅಭಿಮತದ ಓದುಗರಿಗೆ ಮತ್ತು ಬರಹಗಾರರಿಗೆ ನಲ್ಮೆಯ ನೆನಕೆಗಳು. ಈ ಸಂಪುಟದ ಎಲ್ಲಾ ಸಂಚಿಕೆಗಳನ್ನು ಸಂಗ್ರಹಯೋಗ್ಯವನ್ನಾಗಿಸಲು ನಿಮಗೆಲ್ಲರಿಗೂ ಹಾರ್ದಿಕ ಸ್ವಾಗತ. ಅಭಿಮತದ ಹಿಂದಿನ ದಿನಗಳ ಮೆಲುಕು, ಹೊಸ ಆವಿಷ್ಕಾರಗಳ ಕುರಿತು ಸಲಹೆ, ದೆಹಲಿ ಮತ್ತು ಕರ್ನಾಟಕದ ಕುರಿತು ವಿಶೇಷ ಬರಹಗಳಿಗೆ ಎಂದಿನಂತೆ ಅಭಿಮತದ ಪುಟಗಳು ನಿಮಗಾಗಿ ಕಾದಿವೆ.

ಬೆಳಕಿನ ಹಬ್ಬ ಅಭಿಮತದ ಓದುಗರಿಗೆ ಹೊಸ ಹುರುಪು ಮತ್ತು ಹುಮ್ಮಸ್ಸನ್ನು ನೀಡಲಿ ಎಂಬ ಹಾರೈಕೆಗಳೊಂದಿಗೆ. ಅ

ಬಾಲಕೃಷ್ಣ ನಾಯ್ಕ್ ಡಿ.

# ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳಿಂದ ಮುಖ್ಯಮಂತ್ರಿಗಳ ಭೇಟಿ- ಅನುದಾನಕ್ಕೆ ಮನವಿ



ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರ ನೇತೃತ್ವದಲ್ಲಿ ದಿನಾಂಕ 03.09.2014ರಂದು ಕರ್ನಾಟಕದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠಕ್ಕೆ ನಾಲ್ಕು ಕೋಟಿ ರೂಪಾಯಿಗಳ ಅನುದಾನವನ್ನು ನೀಡುವಂತೆ ಮನವಿ ಮಾಡಿಕೊಂಡರು. ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಈಗ ದಶಮಾನೋತ್ಸವವನ್ನು ಆಚರಿಸುತ್ತಿದ್ದು ಈ ಸಂದರ್ಭದಲ್ಲಿ ಕಟ್ಟಡ ವಿಸ್ತರಣೆ ಕೆಲಸ ಮತ್ತು ಕಟ್ಟಡದ ದುರಸ್ತಿ ಕೆಲಸ, ಸಭಾಂಗಣಕ್ಕೆ ಹೊಸ ಧ್ವನಿವರ್ಧಕ, ಬೆಳಕು ಅಳವಡಿಕೆ, ಸಂಘದ 60 ವರ್ಷಗಳ ಆಡಿಯೋ, ವಿಡಿಯೋ ದಾಖಲೀಕರಣ, ವಾಚನಾಲಯದ ಗಣಕೀಕರಣ ಮತ್ತು ಆಡಿಯೋ ವಿಡಿಯೋ ಸಂಗ್ರಹಾಲಯದ ಸ್ಥಾಪನೆ, ರಾಜಧಾನಿಯಲ್ಲಿ ಕನ್ನಡ ಕಲಿಸುವ ವ್ಯವಸ್ಥೆ (ಡಿಜಿಟಲ್ ಲೈಬ್ರರಿ), ಆರ್ಟ್‌ಗ್ಯಾಲರಿಯ ಹೆಚ್ಚುವರಿ ಕೆಲಸ, ನಾಟಕಗಳಿಗೆ ಬೇಕಾಗುವ ರಂಗ ಪರಿಕರಗಳು, ಸಂಘದ ಮುಂಭಾಗದಲ್ಲಿ ಹಾಗೂ ಒಳಭಾಗದಲ್ಲಿ ಕರ್ನಾಟಕದ ಶಿಲ್ಪ ಕಲೆಯನ್ನು ಪ್ರತಿಬಿಂಬಿಸುವ ಶಿಲ್ಪ ಕಲಾಕೃತಿಗಳ ಅನುಷ್ಠಾನ, ಕರ್ನಾಟಕವನ್ನು ಕರ್ನಾಟಕೇತರ ಜನರಿಗೆ ಪರಿಚಯಿಸುವ ಧ್ವನಿ ಮತ್ತು ಬೆಳಕಿನ ವ್ಯವಸ್ಥೆಯ ಅನುಷ್ಠಾನ ಇತ್ಯಾದಿ ಯೋಜನೆಗಳಿಗೆ ಎರಡೂವರೆ ಕೋಟಿ ರೂಪಾಯಿ ಅನುದಾವನ್ನು ನೀಡುವಂತೆಯೂ ಮನವಿ ಸಲ್ಲಿಸಿದರು.



ಕೇಂದ್ರದ ಮಾಜಿ ಸಚಿವ, ರಾಜ್ಯಸಭಾ ಸದಸ್ಯರಾದ ಶ್ರೀ ಆಸ್ಕರ್ ಫರ್ನಾಂಡಿಸ್, ರಾಜ್ಯಸಭಾ ಸದಸ್ಯರಾದ ಶ್ರೀ ಬಿ.ಕೆ. ಹರಿಪ್ರಸಾದ್, ಲೋಕಸಭಾ ಸದಸ್ಯ ಶ್ರೀ ಧ್ರುವ ನಾರಾಯಣ ಅವರು ಕೂಡಾ ಈ ಸಂದರ್ಭದಲ್ಲಿ ಹಾಜರಿದ್ದು ಸಂಘವು ಉತ್ತಮ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದು ಸರಕಾರದಿಂದ ಹೆಚ್ಚಿನ ಸಹಕಾರ ನೀಡುವಂತೆ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಂಡರು. ಈ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಉಪಾಧ್ಯಕ್ಷರಾದ ಶ್ರೀಮತಿ ಆಶಾಲತಾ ಎಂ., ಜಂಟಿ ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ ಮತ್ತು ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಆಶಾಶ್ಯಾಮಸುಂದರ್ ಅವರು ಹಾಜರಿದ್ದರು. ಅ

*ಅಭಿಮತ ವರದಿ*


**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020


E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
Oct - 2014, Vol. No.25, Issue No.1, Price Rs.1/- RNI Regn. No. 53405/91, DL-SW-1/4016/13-15
Printout Date : Oct 8th / 9th, Postal Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.







# ಸಂಘದಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳು

